ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಮುಂದಿನ ಆವೃತ್ತಿಯಲ್ಲಿ ಮಾರ್ಚ್ 10 ರಿಂದ ಮೇ 15ರವರೆಗೆ ಐಪಿಎಲ್ ನಡೆಯುವ ನಿರೀಕ್ಷೆ ಇದೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಿಳಿಸಿದ್ದಾರೆ.

19 ಜೂನ್, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 100 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಚಂದನವನಕ್ಕೆ ಪರಭಾಷಾ ಚಿತ್ರಗಳ ಪೈಪೋಟಿ » 2



ಎಸ್.ಐ.ಆರ್. ಕಾರ್ಯ ಜವಾಬ್ದಾರಿಯಿಂದ ನಿರ್ವಹಿಸಿ 3



ನೀಟ್ ಮರು ಪರೀಕ್ಷೆ : ಟೆಲಿಗ್ರಾಮ್ ನಿಷೇಧಕ್ಕೆ ಆಕ್ಷೇಪ » 4

# ಅಡ್ಡ ಮತದಾನ: 5 ಸ್ಥಾನ ಗೆದ್ದುಕೊಂಡ ಕಾಂಗ್ರೆಸ್

## ಬಿಜೆಪಿಗೆ ಎರಡು ಸ್ಥಾನಗಳಲ್ಲಿ ಗೆಲುವು: ಜೆಡಿಎಸ್ ಅಭ್ಯರ್ಥಿಗೆ ಸೋಲು

• ಪ್ರಜೋದಯ ವರದಿ

**ಬೆಂಗಳೂರು:** ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ಶಾಸಕರ ಅಡ್ಡ ಮತದಾನದ ನೆರವಿನಿಂದ ಕಾಂಗ್ರೆಸ್‌ನ ಐದು ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಚುನಾವಣೆಯಲ್ಲಿ ಬಿಜೆಪಿಯ ಮೂವರು ಮತ್ತು ಜೆಡಿಎಸ್‌ನ ಏಳು ಮಂದಿ ಅಡ್ಡ ಮತದಾನ ಮಾಡಿದ್ದು, ಬಿಜೆಪಿಯ ಒಬ್ಬ ಶಾಸಕರ ಮತ ಅಸಿಂಧುವಾಗಿದೆ.

ಗುರುವಾರ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ವಿಧಾನಸೌಧದ ಕೊಠಡಿ ಸಂಖ್ಯೆ 106ರಲ್ಲಿ ಮತದಾನ ನಡೆದು, ಸಂಜೆ 5 ಗಂಟೆಗೆ ನಡೆದ ಮತ ಎಣಿಕೆ ಬಳಿಕ ಫಲಿತಾಂಶ ಪ್ರಕಟಗೊಂಡಿತು. ಸಂಖ್ಯಾಬಲ ಆಧರಿಸಿ ಕಾಂಗ್ರೆಸ್ 4 ಹಾಗು ಬಿಜೆಪಿ 2 ಸ್ಥಾನ ಗೆಲ್ಲಲಿದೆ ಎಂದು ನಿರೀಕ್ಷಿಸಲಾಗಿತ್ತು. ಬಾಕಿ 1 ಸ್ಥಾನಕ್ಕೆ ಕಾಂಗ್ರೆಸ್ ಹಾಗು ಜೆಡಿಎಸ್ ನಡುವೆ ಸ್ಪರ್ಧೆ ಇತ್ತು. ಕೊನೆಗೆ ಕಾಂಗ್ರೆಸ್‌ನ ಅಭ್ಯರ್ಥಿ ವಿನಯ್ ಕಾರ್ತಿಕ್ ಗೆಲುವು ಸಾಧಿಸಿದ್ದು, ಜೆಡಿಎಸ್‌ನ ಗೋವಿಂದರಾಜು ಅವರು ಸೋತಿದ್ದಾರೆ.

ಭಾರೀ ಕುತೂಹಲ ಮೂಡಿಸಿದ್ದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಏಕೈಕ ಅಭ್ಯರ್ಥಿ ಸೋಲುಂಡಿದ್ದು, ಬಿಜೆಪಿ ಮತ್ತು ಜೆಡಿಎಸ್‌ನಿಂದ ಅಡ್ಡ ಮತದಾನವಾಗಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿ ವಿನಯ್ ಕಾರ್ತಿಕ್‌ಗೆ 32 ಮತಗಳು ಬಂದಿದ್ದರೆ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಪರ 14 ಮತಗಳು ಬಿದ್ದಿವೆ.

ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ 30, ಪಿ.ವಿ.ಮೋಹನ್ 29, ಬಿ.ಎಸ್.ಶಿವಣ್ಣ 30, ತಿಪ್ಪಣ್ಣಪ್ಪ ಕಮಕನೂರ 30 ಮತ್ತು ವಿನಯ್ ಕಾರ್ತಿಕ್ 32 ಮತಗಳನ್ನು ಗಳಿಸಿ ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ನಿಗದಿತ 140 ಮತಕ್ಕಿಂತ 11 ಹೆಚ್ಚು ಮತಗಳನ್ನು ಗಳಿಸಿದೆ.

ಬಿಜೆಪಿಯ ರಘು ಕೌಟಿಲ್ಯ 29 ಮತ್ತು ಲಿಂಗರಾಜಪಾಟೀಲ ಅವರು 27 ಮತಗಳಿಸಿ ಗೆಲುವು ಸಾಧಿಸಿದ್ದಾರೆ. ಒಬ್ಬ ಅಭ್ಯರ್ಥಿಯ ಗೆಲುವಿನ ಕೋಟ 27.63 ಮತಗಳನ್ನು ನಿಗದಿ ಮಾಡಲಾಗಿತ್ತು. ಆದರೆ, ಲಿಂಗರಾಜ ಪಾಟೀಲ ಅವರು ಆ ಕೋಟ ತಲುಪುವಲ್ಲಿ ವಿಫಲರಾದರು. ಎಲಿಮಿನೇಷನ್ ಸುತ್ತಿನಲ್ಲಿ ಗೆಲುವು ಸಾಧಿಸಿದರು. ರಘು ಪಾಟೀಲ ಅವರಿಗೆ ಚಲಾಯಿಸಿದ ಮತಗಳ ಪೈಕಿ ಒಂದು ಮತ ಅಸಿಂಧುವಾಗಿದೆ.

**ಹೆಚ್ಚುವರಿ ಮತ ಪಡೆದ ಕಾಂಗ್ರೆಸ್:** ಜೆಡಿಎಸ್ ಹಾಗೂ ಬಿಜೆಪಿಯ ಮತಗಳು ಕಾಂಗ್ರೆಸ್ ಪಾಲಾಗಿದ್ದರಿಂದ, 4 ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಸಾಮರ್ಥ್ಯವಿದ್ದ ಕಾಂಗ್ರೆಸ್ 5ನೇ ಅಭ್ಯರ್ಥಿಯಾಗಿದ್ದ ವಿನಯ್ ಕಾರ್ತಿಕ್ ಅವರನ್ನೂ ಗೆಲ್ಲಿಸಿಕೊಂಡಿದೆ. ಬಿಜೆಪಿ ವಿಧಾನಸಭೆಯಲ್ಲಿ 62 ಸದಸ್ಯ ಬಲ ಹೊಂದಿದ್ದು, ತನ್ನ ಇಬ್ಬರು ಅಭ್ಯರ್ಥಿಗಳಿಗೆ 30 ಹಂಚಿಕೆ ಮಾಡಿ ಉಳಿದವುಗಳನ್ನು ಜೆಡಿಎಸ್ ಅಭ್ಯರ್ಥಿಗೆ ಹಾಕಲು ಸೂಚಿಸಲಾಗಿತ್ತು. ಆದರೆ, ಬಿಜೆಪಿ ಅಭ್ಯರ್ಥಿಗಳಿಗೇ ಕಡಿಮೆ ಮತ ಬಿದ್ದಿದ್ದು, ಅಡ್ಡ ಮತದಾನ ಕಾಂಗ್ರೆಸ್ ಪಾಲಾಗಿವೆ.

**ಶಿಸ್ತುಕ್ರಮ ನಿಶ್ಚಿತ: ಅಶೋಕ್**
ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಮೂವರು ಶಾಸಕರಿಂದ ಅಡ್ಡಮತದಾನ ಆಗಿವಾಗಿದೆ. ಅವರ ವಿರುದ್ಧ ಶಿಸ್ತುಕ್ರಮ ನಿಶ್ಚಿತ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಅವರು ತಿಳಿಸಿದರು.

ಫಲಿತಾಂಶ ಪ್ರಕಟವಾದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯಿಂದ ಲಿಂಗರಾಜು ಪಾಟೀಲ್, ರಘುಕೌಟಿಲ್ಯ ಗೆದ್ದಿದ್ದಾರೆ. ನಮ್ಮ ಮೂರು ವೋಟುಗಳು ಕ್ರಾಸ್ ಆಗಿದೆ ಅಂತ ಮಾಹಿತಿ ಬಂದಿದೆ. ಯಾರು ಕ್ರಾಸ್ ವೋಟು ಹಾಕಿದ್ದಾರೆ ಎಂದು ಗೊತ್ತಾಗುತ್ತದೆ. ಅವರ ವಿರುದ್ಧ ಪಕ್ಷದಿಂದ ಶಿಸ್ತು ಕ್ರಮ ನಿಶ್ಚಿತ. ನಮ್ಮ ಒಂದು ಮತ ಅಸಿಂಧು ಆಗಿದೆ. ನಾಲ್ಕು ವೋಟು ಜೆಡಿಎಸ್‌ಗೆ ಕೊಟ್ಟಿದ್ದೀವಿ ಎಂದು ಹೇಳಿದರು.



ಬಿ.ಕೆ.ಹರಿಪ್ರಸಾದ್ | ಪಿ.ವಿ.ಮೋಹನ್ | ಬಿ.ಎಸ್.ಶಿವಣ್ಣ | ತಿಪ್ಪಣ್ಣಪ್ಪ ಕಮಕನೂರ್ | ವಿನಯ್ ಕಾರ್ತಿಕ್

- ಕಾಂಗ್ರೆಸ್–ಗೆದ್ದ ಅಭ್ಯರ್ಥಿಗಳು
- ಬಿ.ಕೆ.ಹರಿಪ್ರಸಾದ್: ಪಡೆದ ಮತಗಳು 30
- ತಿಪ್ಪಣ್ಣಪ್ಪ ಕಮಕನೂರು: 30 ಮತ
- ಪಿ.ವಿ.ಮೋಹನ್: 29 ಮತ
- ಬಿ.ಎಸ್.ಶಿವಣ್ಣ: 30 ಮತ
- ವಿನಯ್ ಕಾರ್ತಿಕ್ (5ನೇ ಅಭ್ಯರ್ಥಿ): 32 ಮತ

ಹೊಸ ಸರ್ಕಾರ ಬಂದ ಮೇಲೆ ನಡೆದ ಚುನಾವಣೆಯಲ್ಲಿ ಶಾಸಕರ ಬೆಂಬಲ ನೋಡಿ ಆಶ್ಚರ್ಯವಾಗುತ್ತಿದೆ. ನಮಗೆ ಬೇರೆ ಬೇರೆ ಪಕ್ಷದವರು ಮತ ಕೊಟ್ಟಿದ್ದಾರೆ. ಅವರ ವಿಶ್ವಾಸಕ್ಕೆ, ಭಾವನೆಗೆ ನಾವು ಗೌರವಿಸುತ್ತೇವೆ. ಶಿವರಾಮ್ ಹೆಬ್ಬಾರ್, ಸೋಮಶೇಖರ್ ಉಚ್ಚಾಟನೆಯಿಂದ ದಾರಿಯಲ್ಲಿ ಇದ್ದರು. ಅವರಿಗೆ ದಾರಿ ತೋರಿಸುವ ಕೆಲಸ ಮಾಡಿದ್ದೇವೆ.
–ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ



ಶ್ರೀ ಲಿಂಗರಾಜು ಪಾಟೀಲ್ | ಶ್ರೀ ಆರ್. ರಘು ಕೌಟಿಲ್ಯ

- ಬಿಜೆಪಿ–ಗೆದ್ದ ಅಭ್ಯರ್ಥಿಗಳು
- ಆರ್.ರಘು: 29 ಮತಗಳು
- ಲಿಂಗರಾಜು ಪಾಟೀಲ್: 27 ಮತ

- ಜೆಡಿಎಸ್–ಸೋತ ಮೈತ್ರಿ ಅಭ್ಯರ್ಥಿ
- ★ ಗೋವಿಂದರಾಜು: ಪಡೆದ ಮತಗಳು 14

## ಮಾವು ಬೆಳೆಗಾರರಿಗೆ ನೆರವಾಗುವಂತೆ ಹೆಚ್.ಡಿ.ಕುಮಾರಸ್ವಾಮಿ ಮನವಿ

• ಪ್ರಜೋದಯ ವರದಿ

**ಬೆಂಗಳೂರು:** ಬೆಲೆ ಕುಸಿತದಿಂದ ಕಂಗೆಟ್ಟಿರುವ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸುವಂತೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದಿದ್ದಾರೆ.

2026–27ನೇ ಸಾಲಿನಲ್ಲಿ ರೈತರು ಎದುರಿಸುತ್ತಿರುವ ಬೆಲೆ ಕುಸಿತ ಸಂಕಷ್ಟವನ್ನು ತಗ್ಗಿಸಲು ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ (ಎಂಐಎಸ್) ಮೂಲಕ ನೆರವಾಗಬೇಕು. ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ಬೆಂಬಲ ಬೆಲೆ ನೀಡಬೇಕೆಂದು ವಿನಂತಿಸಿದ್ದಾರೆ.

ರೈತರು ಮತ್ತು ತೋಟಗಾರಿಕೆ ವಲಯದ ಹಿತಾಸಕ್ತಿಯ ದೃಷ್ಟಿಯಿಂದ ಈ ವಿಷಯವನ್ನು ಸಹಾನುಭೂತಿಯಿಂದ ಪರಿಗಣಿಸುವಂತೆ ಕೋರಿದ್ದಾರೆ. ಕರ್ನಾಟಕವು ಅಧಿಕ ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ಗಳಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ 10 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಯಲಾಗಿದೆ. ಆದರೆ, ಬೆಲೆ ಕುಸಿತ ಹಾಗು ಪ್ರತಿಕೂಲ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆಂದು ಕುಮಾರಸ್ವಾಮಿ ಅವರು ಕೃಷಿ ಸಚಿವರ ಗಮನ ಸೆಳೆದಿದ್ದಾರೆ.



ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ಧಾರವಾಡ, ತುಮಕೂರು ಮತ್ತು ಹಾವೇರಿಯಂತಹ ಜಿಲ್ಲೆಗಳಲ್ಲಿ ಸಾವಿರಾರು ರೈತ ಕುಟುಂಬಗಳು ಮಾವು ಕೃಷಿಯನ್ನು ಅವಲಂಬಿಸಿದೆ. ಇದು ಅತ್ಯಂತ ಪ್ರಮುಖ ವಾಣಿಜ್ಯ ತೋಟಗಾರಿಕಾ ಬೆಳೆಯಾಗಿದೆ. ಮಾರುಕಟ್ಟೆಯ ಏರಿಳಿತಗಳು ಮತ್ತು ಅತಿಯಾದ ಪೂರೈಕೆ ಪರಿಸ್ಥಿತಿಗಳಿಂದಾಗಿ ಅನೇಕ ಬೆಳೆಗಾರರು ತಮ್ಮ ಉತ್ಪನ್ನಗಳನ್ನು ಲಾಭದಾಯಕ ಮಟ್ಟಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಪಿಡಿಪಿಎಸ್ ಚೌಕಟ್ಟಿನ ಅಡಿಯಲ್ಲಿ ಮಾವು ಬೆಳೆಗಾರರಿಗೆ ಸೂಕ್ತ ಬೆಂಬಲವನ್ನು ನೀಡುವ ಬಗ್ಗೆ ಪರಿಗಣಿಸಲು ಮತ್ತು ಅಗತ್ಯ ಆಡಳಿತಾತ್ಮಕ ಪ್ರಕ್ರಿಯೆಯನ್ನು ಆದಷ್ಟು ಬೇಗ ಪ್ರಾರಂಭಿಸಲು ಕೃಷಿ ಸಚಿವಾಲಯ ಮುಂದಾಗಬೇಕೆಂದು ಕೋರಿದ್ದಾರೆ.

## ಎತ್ತಿನಹೊಳೆ ಅರಣ್ಯರೋದನ ನಿವಾರಣೆ: ಕೆಲಸ ಪ್ರಾರಂಭ

-ಕೆ.ಪಿ.ಸಾಗರ್ ರಾಜು

- 515 ಎಕರೆ ಬದಲಿ ಭೂಮಿ ಹಸ್ತಾಂತರ
- ಕಾಮಗಾರಿಗೆ ಅರಣ್ಯ ಇಲಾಖೆ ಅನುಮತಿ

• ಪ್ರಜೋದಯ ವರದಿ

**ಹಾಸನ:** ಬಯಲುಸೀಮೆಗೆ ನೀರೊದಗಿಸುವ ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಬೇಲೂರು ತಾಲ್ಲೂಕಿನ ಐದಳ್ಳ ಕಾವಲು ಪ್ರದೇಶದಲ್ಲಿ ಎದುರಾಗಿದ್ದ ಅರಣ್ಯ ಭೂಮಿ ಸಮಸ್ಯೆ ಬಗೆಹರಿದು ಕೆಲಸ ಪ್ರಾರಂಭವಾಗಿದೆ. ಹಾಸನ–ತುಮಕೂರು ವಲಯ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯಿಂದ ಇದ್ದ ಎಲ್ಲಾ ಅಡೆತಡೆಗಳು ನಿವಾರಣೆಯಾಗಿವೆ.

ನೀರು ಹರಿಸುವ ಹಂತ–2 ನಾಲೆ ನಿರ್ಮಾಣ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ಅಡ್ಡಿಯುಂಟಾಗಿದ್ದರಿಂದ ಕೆಲಸ ಅರ್ಧಕ್ಕೆ ಸ್ಥಗಿತಗೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರ ನಡುವೆ ಹಗ್ಗಾಜಗ್ಗಾಟಕ್ಕೆ ಕಾರಣವಾಗಿತ್ತು.

ಹೀಗಾಗಿ 32 ಕಿಲೋ ಮೀಟರ್ ವರೆಗೆ ನೀರು ಹರಿಸಲು ಸಾಧ್ಯವಾಗಿದ್ದು, ಅಲ್ಲಿಂದ ಕಾಗೆಹಳ್ಳದ ಮೂಲಕ ವಾಣಿವಿಲಾಸ ಸಾಗರ (ಮಾರಿಕಣಿವೆ) ಜಲಾಶಯಕ್ಕೆ ನೀರನ್ನು ವ್ಯರ್ಥವಾಗಿ ಹರಿಸುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಕಳೆದ ಮೂರ್ನಾಲ್ಕು ವರ್ಷಗಳಿಂದ ಎದುರಾಗಿದ್ದ ಅರಣ್ಯ ಇಲಾಖೆಯ ಅಡೆತಡೆಗಳು ಕೇಂದ್ರ ಸರ್ಕಾರ ಮಟ್ಟದಿಂದಲೇ ನಿವಾರಣೆಯಾಗಿದೆ. ಇದೀಗ ಕುಡಿಯುವ ನೀರಿನ ಅನುಕೂಲಕ್ಕಾಗಿ ಕೇಂದ್ರ ಪರಿಸರ ಇಲಾಖೆ ಐದಳ್ಳಕಾವಲು ಅರಣ್ಯ ಪ್ರದೇಶದಕ್ಕೆ ಕಾಮಗಾರಿ ನಡೆಸಲು ರಾಜ್ಯ ಸರ್ಕಾರಕ್ಕೆ ಅನುಮತಿ ನೀಡಿದೆ.

**ಅರಣ್ಯ ಇಲಾಖೆಗೆ ಬದಲಿ ಭೂಮಿ**
ಜಿಲ್ಲೆಯಲ್ಲಿ ಎತ್ತಿನಹೊಳೆ ಯೋಜನೆಗೆ 111 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬಳಕೆ ಮಾಡಿಕೊಳ್ಳಲಾಗಿದೆ. ಅದಕ್ಕೆ ಬದಲಿ ಭೂಮಿಯಾಗಿ 515 ಎಕರೆಯನ್ನು ಅರಸೀಕೆರೆ, ಬೇಲೂರು ತಾಲ್ಲೂಕು ಭಾಗದಲ್ಲಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ. ಅಲ್ಲಿ ಗಿಡಗಳನ್ನು ಬೆಳೆಸಲು ವಿಶ್ವೇಶ್ವರಯ್ಯ ಜಲನಿಗಮ ಹಣವನ್ನು ಠೇವಣಿ ಇಟ್ಟಿದೆ. ಹೀಗಾಗಿ ಮೂರು ಷರತ್ತುಗಳೊಂದಿಗೆ ಕೆಲಸ ನಡೆಸಲು ಅನುಮತಿ ಸಿಕ್ಕಿದೆ. ಕೇಂದ್ರದಿಂದ ಅಂತಿಮ ಹಂತದ ಅನುಮತಿ ಕೆಲವೇ ದಿನಗಳಲ್ಲಿ ದೊರೆಯುವ ನಿರೀಕ್ಷೆ ವ್ಯಕ್ತವಾಗಿದೆ.



**ಎದುರಾಗಿದ್ದ ಅಡ್ಡಿ ನಿವಾರಣೆ**
ಎತ್ತಿನಹೊಳೆ ಯೋಜನೆಯ ಪ್ಯಾಕೇಜ್–6ರ 55ನೇ ಕಿಲೋ ಮೀಟರ್‌ನಲ್ಲಿ 33 ಎಕರೆ 31 ಗುಂಟೆ ಅರಣ್ಯ ಭೂಮಿಯನ್ನು ಸ್ವಾಧೀಯ ಪಡಿಸಿಕೊಳ್ಳುವ ಸಲುವಾಗಿ ಅರಣ್ಯ ತೀರುವಳಿ ಪ್ರಸ್ತಾವನೆಗೆ ಅನುಮತಿ ಸಿಕ್ಕಿದೆ. ಅಲ್ಲದೇ ಅರಸೀಕೆರೆ ತಾಲ್ಲೂಕಿನ ನಾಯಕನ ಕೆರೆ ಕಾವಲು, ಕಾಲ್ಯಾಡಿ ಗ್ರಾಮದ ಬಳಿ 56 ರಿಂದ 64 ಕಿ.ಮೀ. ವರೆಗಿನ ಪ್ರದೇಶದಲ್ಲೂ ಅಡ್ಡಿಯು ತೆರೆವಾಗಿದೆ. ಪ್ಯಾಕೇಜ್–7ರಲ್ಲಿ 78ನೇ ಕಿ.ಮೀ. ವ್ಯಾಪ್ತಿಯಲ್ಲಿ (ಅರಸೀಕೆರೆ–ಮೈಸೂರು) ರೈಲ್ವೆ ಕ್ರಾಸಿಂಗ್ ಬರುತ್ತಿರುವುದಿಂದ ರೈಲ್ವೆ ಇಲಾಖೆ ಟ್ರ್ಯಾಕ್‌ಭದ್ರತಾ ಕಾಮಗಾರಿಯನ್ನು ಪೂರ್ಣಗೊಳಿಸಿ ಕೊಡಬೇಕಾಗಿದೆ. ಅದಕ್ಕಾಗಿ 9.2 ಕೋಟಿ.ರೂ. ಹಣವನ್ನು ಇಲಾಖೆಗೆ ಸಂದಾಯ ಮಾಡಲಾಗಿದೆ. 2023 ನವೆಂಬರ್‌ನಿಂದಲೇ ಪೂರ್ವ ಪರಿಕ್ಷಾರ್ಥ ಚಾಲನಾ ಚಟುವಟಿಕೆಗಳನ್ನು ಕೈಗೊಳ್ಳಲಾಗಿತ್ತು. ವಿಯರ್–45 ರಿಂದ ನೀರನ್ನೆತ್ತಿ ವಿತರಣಾ ತೊಟ್ಟಿ–3 ರವರೆಗೆ ನೀರನ್ನು ಪೂರೈಸಲಾಗಿತ್ತು. ಇವುಗಳ ಜೊತೆ ವಿಯರ್–1 ರಿಂದಲೂ ಸಹ ನೀರನ್ನೆತ್ತಿ ವಿತರಣಾ ತೊಟ್ಟಿ–4 ರವರೆಗೆ ಪೂರೈಸಿ, ಅಲ್ಲಿಂದ ಗುರುತ್ವ ಕಾಲುವೆಗೆ 2024 ಆಗಸ್ಟ್‌ನಲ್ಲಿ ಯಶಸ್ವಿಯಾಗಿ ನೀರು ಹರಿಸಲಾಗಿತ್ತು. ಗುರುತ್ವ ಕಾಲುವೆ ಮೂಲಕ ನೀರು 32 ಕಿ.ಮೀ ವರೆಗೆ ತಲುಪಿತ್ತು. ಅಲ್ಲಿ ಅರಣ್ಯ ಇಲಾಖೆ ಅಡ್ಡಿಪಡಿಸಿದ್ದರಿಂದ ವಿಧಿ ಇಲ್ಲದೇ ನೀರನ್ನು ವಾಣಿವಿಲಾಸ (ಮಾರಿಕಣಿವೆ) ಜಲಾಶಯಕ್ಕೆ ಹರಿಸಲಾಗುತ್ತಿದೆ. ಸದ್ಯ ಎದುರಾಗಿದ್ದ ಅರಣ್ಯ ಇಲಾಖೆಯ ಸಮಸ್ಯೆ ನಿವಾರಣೆಯಾಗಿ ಕಾಮಗಾರಿ ಪ್ರಾರಂಭವಾಗಿರುವುದರಿಂದ ಮುಂದಿನ ಮುಂಗಾರಿಗೆ ನೀರು ಅರಸೀಕೆರೆಗೆ ದಾಟಿ ತುಮಕೂರು ಜಿಲ್ಲೆ ತಲುಪುವ ಆಶಾ ಭಾವನೆ ವ್ಯಕ್ತವಾಗಿದೆ.

> ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಅರಣ್ಯ ಇಲಾಖೆ ಅನುಮತಿ ನೀಡಿದ್ದು, ಐದಳ್ಳಕಾವಲು ಅರಣ್ಯ ಪ್ರದೇಶದಲ್ಲಿ ಕೆಲಸ ಕೂಡ ಪ್ರಾರಂಭವಾಗಿದೆ. ಅರಣ್ಯ ಪ್ರದೇಶ ಬಳಕೆಗೆ ಪರ್ಯಾಯ ಭೂಮಿ ನೀಡಿದ್ದು, ಅಲ್ಲಿ ಗಿಡಗಳನ್ನು ಬೆಳೆಸಲಾಗುತ್ತಿದೆ. ಕಾಮಗಾರಿಗೆ ನಮ್ಮಿಂದ ಯಾವುದೇ ಅಡ್ಡಿ ಇಲ್ಲ.
> -ವಿ.ಏಡುಕೊಂಡಲು, ಸಿಸಿಎಫ್

# ಟೀಕಿಸುವುದು ಬಿಟ್ಟು ಜಿಲ್ಲೆ ಅಭಿವೃದ್ಧಿಗೆ ಗಮನ ಹರಿಸಿ

## ಸಂಸದ ಶ್ರೇಯಸ್ ಪಟೇಲ್‌ಗೆ ಜೆಡಿಎಸ್ ಜಿಲ್ಲಾಧ್ಯಕ್ಷ ಲಿಂಗೇಶ್ ತಿರುಗೇಟು

• ಪ್ರಜೋದಯ ವರದಿ

**ಹಾಸನ:** ಸಂಸದ ಶ್ರೇಯಸ್ ಅವರು ಜೆಡಿಎಸ್ ನಾಯಕ ಹೆಚ್.ಡಿ. ರೇವಣ್ಣ ಅವರ ಬಗ್ಗೆ ಟೀಕೆ ಮಾಡುವುದನ್ನು ಬಿಟ್ಟು, ಜಿಲ್ಲೆಯ ಅಭಿವೃದ್ಧಿ ಕಡೆಗೆ ಗಮನ ಹರಿಸಲಿ. ಜಿಲ್ಲೆಯ ಕಾಂಗ್ರೆಸ್ ಶಾಸಕರಿಗೆ ಸಚಿವ ಸ್ಥಾನ ಕೊಡಿಸುವ ಪ್ರಯತ್ನ ಮಾಡಲಿ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ತಿರುಗೇಟು ನೀಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವೇಗೌಡರ ಕುಟುಂಬವನ್ನು ತೆಗಳಿದರೆ ದೊಡ್ಡ ನಾಯಕರಾಗಿ ಬೆಳೆಯ ಬಹುದೆಂಬ ಚಾಳಿ ಹಲವರಲ್ಲಿದೆ. ಆ ಚಾಳಿಯನ್ನು ಬಿಟ್ಟು ಅಭಿವೃದ್ಧಿ ಕಾರ್ಯಗಳ ಮೂಲಕ ನಾಯಕರಾಗಿ ಬೆಳೆಯಿರಿ. ಜನರ ಕೆಲಸ ಕಾರ್ಯಗಳು ನಡೆಯದಿದ್ದಾಗ ಹೆಚ್.ಡಿ.ರೇವಣ್ಣ ಅವರು ಜಿಲ್ಲಾಧಿಕಾರಿಯನ್ನು ಟೀಕೆ ಮಾಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಟೀಕೆ ಮಾಡುವುದು ಸಹಜ, ಒಬ್ಬ ಜನಪ್ರತಿನಿಧಿಯಾಗಿ ಜನರ ಕೆಲಸವಾಗದಿದ್ದಾಗ ಟೀಕೆ ಮಾಡ ಬೇಕಾಗುತ್ತದೆ. ಮಹಿಳೆಯರನ್ನು ಗುರಿಯಾಗಿಸಿಕೊಂಡು ಮಾತನಾಡಿಲ್ಲವೆಂದು ಸಮರ್ಥಿಸಿಕೊಂಡ ಅವರು, ಸಂಸದರಿಗೆ ಮಹಿಳೆಯರ ಪರ ಕಾಳಜಿ ಇದ್ದರೆ ಮಹಿಳಾ ರಾಜಕೀಯ ಮೀಸಲಾತಿ ಮಸೂದೆಗೆ ಏಕೆ ವಿರೋಧ ವ್ಯಕ್ತಪಡಿಸಿದರೆಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ ಬಿಡದಿ ಟೌನ್ ಶಿಪ್ ನಿರ್ಮಾಣದ ಸರ್ಕಾರದ ನಿರ್ಧಾರ ವಿರೋಧಿಸಿ ಜೂ.21 ರಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಅಂಜಿಪುರ ಗ್ರಾಮದಿಂದ ಆರಂಭವಾಗುವ ಹೋರಾಟದಲ್ಲಿ ಜಿಲ್ಲೆಯ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಸೇರಿ 1 ಸಾವಿರಕ್ಕೂ ಹೆಚ್ಚು ಮಂದಿ ಭಾಗಿಯಾಗಲಿದ್ದೇವೆಂದು ಹೇಳಿದರು.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆದ ಬಳಿಕ ವೈಯಕ್ತಿಕ ಸಾಧನೆಯಿಂದಾಗಿ ರೈತರ ಬದುಕು ಮೂರಾಬಟ್ಟೆಯಾಗಿದೆ. ಫಲವತ್ತಾದ

» ನಾಲ್ಕನೇ ಪುಟದಲ್ಲಿ




### ಕಾಲಹರಣ ಬಿಟ್ಟು ಕೆಲಸ ಮಾಡಿ

ಸಂಸದರಿಗೆ ಜಿಲ್ಲೆಯಲ್ಲಿ ಯಾವುದೇ ಕೆಲಸ ಮಾಡಲು ಆಗದಿದ್ದರೂ ಸ್ಥಳ ಪರಿಶೀಲನೆ, ಇಲಾಖೆಗಳ ಪ್ರಗತಿ ಪರಿಶೀಲನೆ ಮಾಡಿಕೊಂಡು ಕಾಲ ಹರಣ ಮಾಡುವುದನ್ನು ಬಿಟ್ಟು, ಅನುದಾನ ತಂದು ಜನರಿಗೆ ಅನುಕೂಲವಾ ಗುವ ಕೆಲಸಗಳನ್ನು ಮಾಡಲಿ. ಜಿಲ್ಲೆಯಲ್ಲಿ ಸಂಸದರು ಮಾಡಿರುವ ಸಾಧನೆ, ಕೆಲಸ– ಕಾರ್ಯಗಳ ಸಾಕ್ಷಿ ಗುಡ್ಡೆ ಏನಿದೆ. ರಾಜ್ಯ, ಕೇಂದ್ರದ ಬಳಿ ಅನುದಾನ ತಂದು, ರಸ್ತೆ ಅಭಿವೃದ್ಧಿ ಪಡಿಸಲಿ, ಸುಮ್ಮನೆ ಅಧಿಕಾರಿಗಳಿಗೆ ಗಡುವು ನೀಡಿದರೆ ಯಾವುದೇ ಪ್ರಯೋಜನ ಆಗದೆಂದು ಲಿಂಗೇಶ್ ಅವರು ತಿರುಗೇಟು ನೀಡಿದರು.

## ವಚನಾನಂದ ಶ್ರೀ ಜಾಮೀನು ರದ್ದು ಅರ್ಜಿ ವಿಚಾರಣೆ ಮುಂದೂಡಿಕೆ

• ಪ್ರಜೋದಯ ವರದಿ

**ದಾವಣಗೆರೆ:** ಹರಿಹರದ ವೀರಶೈವ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿಗೆ ಪೋಕ್ಸೊ ಪ್ರಕರಣದಲ್ಲಿ ನೀಡಿರುವ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಿ ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲಯ ಕಾಯ್ದಿರಿಸಿದ ಆದೇಶವನ್ನು ಜೂ. 30ಕ್ಕೆ ಮುಂದೂಡಿದೆ.


ಜೂ. 11ರಂದು ವಾದ–ಪ್ರತಿವಾದ ಆಲಿಸಿದ್ದ ನ್ಯಾಯಾಲಯ ಆದೇಶವನ್ನು ಜೂ. 18ಕ್ಕೆ ಕಾಯ್ದಿರಿಸಿತ್ತು.

## ಮಾನಸಿಕ ನೆಮ್ಮದಿಗೆ ಧಾರ್ಮಿಕ ಚಿಂತನೆ ಸಹಕಾರಿ: ಶಿವಸಿದ್ದೇಶ್ವರ ಶ್ರೀ

• ಪ್ರಜೋದಯ ವರದಿ

**ಹಾಸನ:** ನಮ್ಮ ದೇಶದ ಸನಾತನ ಸಂಸ್ಕೃತಿ, ಪರಂಪರೆ ಮತ್ತು ಧಾರ್ಮಿಕ ಮೌಲ್ಯಗಳು ಇಂದಿಗೂ ಗ್ರಾಮೀಣ ಪ್ರದೇಶಗಳ ದೇವಾಲಯಗಳ ಮೂಲಕ ಜೀವಂತವಾಗಿದ್ದು, ಇಂತಹ ಧಾರ್ಮಿಕ ಚಿಂತನೆಗಳು ಸಮಾಜದಲ್ಲಿ ಶಾಂತಿ ಹಾಗು ಮನಸ್ಸಿಗೆ ನೆಮ್ಮದಿ ನೀಡುತ್ತವೆಂದು ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಶ್ರೀ ಶಿವಸಿದ್ದೇಶ್ವರ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕಟ್ಟಾಯ ಹೋಬಳಿ ಬ್ಯಾಡರಹಳ್ಳಿ ಗ್ರಾಮದಲ್ಲಿ ಕೇರೆ ಕೋಡಿಯಮ್ಮ ದೇವಸ್ಥಾನದ ಪ್ರಾರಂಭೋತ್ಸವದಲ್ಲಿ ಆಶೀರ್ವಚನ ನೀಡಿದ ಅವರು, ಧರ್ಮ, ಸಂಸ್ಕೃತಿ ಹಾಗು ಸಂಪ್ರದಾಯಗಳ ಉಳಿವು ಮತ್ತು ಬೆಳವಣಿಗೆಗೆ ಸಮಾಜ ಸದಾ ಬದ್ಧವಾಗಿರಬೇಕು. ಮಠ–ಮಂದಿರಗಳು ಕೇವಲ ಪೂಜಾ ಸ್ಥಳಗಳಲ್ಲ, ಅವು ಸಮಾಜದಲ್ಲಿ ಶಾಂತಿ, ಸೌಹಾರ್ದತೆ, ನೈತಿಕ ಮೌಲ್ಯ ಹಾಗು ಮಾನವೀಯತೆಯನ್ನು ಬಲ ಪಡಿಸುವ ಕೇಂದ್ರಗಳಾಗಿವೆ. ಇಂತಹ ಆಧ್ಯಾತ್ಮಿಕ ಕಾರ್ಯಕ್ರಮಗಳು ಸಮಾಜವನ್ನು ಒಗ್ಗೂಡಿಸುವ ಶಕ್ತಿ ಹೊಂದಿದ್ದು, ಜನರಲ್ಲಿ ಸತ್ಪ್ರವೃತ್ತಿಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.



ಭಗವಂತ ಪ್ರಾಣಿ–ಪಕ್ಷಿಗಳಿಗೆ ಸಾಮಾನ್ಯ ಜ್ಞಾನವನ್ನು ನೀಡಿದ್ದರೆ ಮನುಷ್ಯನಿಗೆ ಮಾತ್ರ ವಿಶಿಷ್ಟವಾದ ಬುದ್ಧಿ ಶಕ್ತಿ ಮತ್ತು ಉನ್ನತ ಜ್ಞಾನಾರ್ಜನೆ ಮಾಡುವ ಸಾಮರ್ಥ್ಯ ಕರುಣಿಸಿದ್ದಾನೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಬುದ್ಧಿಶಕ್ತಿಯನ್ನು ಸತ್ಕಾರ್ಯಗಳಿಗೆ ಬಳಸಿಕೊಳ್ಳಬೇಕು. ಉನ್ನತ ಚಿಂತನೆಗಳನ್ನು ಬೆಳೆಸಿಕೊಂಡು ಸಮಾಜಮುಖಿ ಜೀವನ ನಡೆಸಬೇಕೆಂದರು.

» ನಾಲ್ಕನೇ ಪುಟದಲ್ಲಿ

## ನಾಳೆ ಬೇಲೂರು ಗೋಕುಲೋತ್ಸವ

• ಪ್ರಜೋದಯ ವರದಿ

**ಹಾಸನ:** ಭಾರತೀಯ ರಂಗಭೂಮಿಯಲ್ಲಿ ಏಕವ್ಯಕ್ತಿ ಅಭಿನಯದ ರಂಗ ಪ್ರಯೋಗ ಮಾಡಿರುವ ಬೇಲೂರಿನ ಗೋಕುಲ ಸಹೃದಯ ಅವರಿಂದ ಜೂ.20 ಮತ್ತು 21 ರಂದು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಬೇಲೂರು ಗೋಕುಲೋತ್ಸವ ನಡೆಯಲಿದೆ ಎಂದು ರಂಗಕರ್ಮಿ ಚಲಂ ಹಾಡ್ಲಹಳ್ಳಿ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೋಕುಲ ಸಹೃದಯ ಅಭಿನಯದ ಡಾ. ಬೇಲೂರು ರಘುನಂದನ್ ನಿರ್ದೇಶನದ, ಕೃಷ್ಣಮೂರ್ತಿ ಕವತ್ತಾರ್ ವಿನ್ಯಾಸ ಮಾಡಿ, ಸಂಗೀತ ನೀಡಿ, ನಿರ್ದೇಶನ ಮಾಡಿರುವ ಚಿಟ್ಟೆ ನಾಟಕ, ದೇಶಾದ್ಯಂತ 137 ರಂಗ ಪ್ರಯೋಗಗಳನ್ನು 10ಕ್ಕೂ ರಾಜ್ಯಗಳಲ್ಲಿ ಪ್ರದರ್ಶನಗೊಂಡಿರುವ ನಾಟಕವಾಗಿದೆ. ಹಾಗೆಯೇ ಎಸ್.ಎಲ್.ಎನ್. ಸ್ವಾಮಿ ಅವರು ರಚಿಸಿ, ಸಂಗೀತ ನೀಡಿ, ನಿರ್ದೇಶನ ಮಾಡಿರುವ ಪಂಚಗವ್ಯ ಪೌರಾಣಿಕ ನಾಟಕ, ಪ್ರಪಂಚದಲ್ಲಿ ಪ್ರಯೋಗಗೊಂಡ ಮೊದಲ ಏಕ ಬಾಲಕ ಪೌರಾಣಿಕ ರಂಗಪ್ರಯೋಗ ಎಂದು ವಿವರಿಸಿದರು.




2 ದಿನಗಳ ನಾಟಕೋತ್ಸವಕ್ಕೆ ನಗರದ ವಿಜಯ ಶಾಲೆ ಸಹಕಾರ ನೀಡಿದ್ದು, ಎರಡೂ ದಿನ ಸಂಜೆ 7 ಗಂಟೆಗೆ ನಾಟಕ ಪ್ರದರ್ಶನ ಆರಂಭವಾಗಲಿದೆ. ಬಾಲ ಕಲಾವಿದ ಗೋಕುಲ ಸಹೃದಯ ಈಗ 10ನೇ ತರಗತಿ ಓದುದ್ದಿತ್ತು, ಚಿತ್ರಕಲೆ, ಸಂಗೀತ, ರಂಗಕಲೆಯ ಬಗ್ಗೆ ಆಸಕ್ತಿ ಹೊಂದಿದ್ದಾನೆ. ತನ್ನ ನಾಲ್ಕನೇ ವಯಸ್ಸಿನಿಂದಲೂ ರಂಗ ಭೂಮಿಯಲ್ಲಿ ತೊಡಗಿಸಿಕೊಳ್ಳಲು ಆರಂಭಿಸಿದ ಬಾಲ ರಂಗಕಲಾವಿದ, ಸಾಲುಮರಗಳ ತಾಯಿ ತಿಮ್ಮಕ್ಕ, ರೂಬಿಕ್ಸ್ ಕ್ಯೂಬ್, ಅಣ್ಣನ ನೆನಪು, ಅರೇಬಿಯನ್ ನೈಟ್ಸ್ ಎಂಬ ನಾಟಕ ಸೇರಿ ಹತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಬೇರೆ ಬೇರೆ ರಂಗತಂಡ ಮತ್ತು ನಿರ್ದೇಶಕರ ಅಡಿಯಲ್ಲಿ ನಾಟಕ ಪ್ರದರ್ಶನಮಾಡಿ ಸೈ ಎನಿಸಿಕೊಂಡಿದ್ದಾನೆ ಎಂದರು.

## ಸಿಪಿಐ ರಾಜ್ಯ ಕಾರ್ಯದರ್ಶಿ ವಿಮಲ | ಹಾಸನದಲ್ಲಿ ದುಂಡು ಮೇಜಿನ ಸಭೆ

# ಎಸ್‌ಐಆರ್ ಪ್ರಜಾಪ್ರಭುತ್ವ ನಾಶಗೊಳಿಸುವ ಪ್ರಕ್ರಿಯೆ

• ಪ್ರಜೋದಯ ವರದಿ

**ಹಾಸನ:** ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ (ಎಸ್‌ಐಆರ್) ಎಂಬ ಪ್ರಕ್ರಿಯೆ ಮೂಲಕ ಬಡವರು, ದಲಿತರು, ಶ್ರಮಿಕರು ಮತ್ತು ಮಹಿಳೆಯರನ್ನು ವ್ಯವಸ್ಥಿತವಾಗಿ ಹೊರತಳ್ಳಲಾಗುತ್ತಿದೆ. ಭಾರತೀಯ ಚುನಾವಣಾ ಆಯೋಗವು ಜಾರಿಗೆ ತರುತ್ತಿರುವ ಎಸ್‌ಐಆರ್ ಪ್ರಜಾಪ್ರಭುತ್ವದ ಆಶಯಗಳಿಗೇ ಮಾರಕವಾಗಿದೆ ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಕೆ.ಎಸ್. ವಿಮಲ ಅವರು ಅಭಿಪ್ರಾಯಪಟ್ಟರು.

ನಗರದಲ್ಲಿ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಹೊರತಳ್ಳಲ್ಪಡುತ್ತಿರುವ ಮತದಾರರು ಮತ್ತು ಚುನಾವಣಾ ಆಯೋಗದ ನೀತಿಗಳು ವಿಷಯ ಕುರಿತು ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಗೆ ಸಂವಿಧಾನದಲ್ಲಿ ಅವಕಾಶವಿಲ್ಲ. ಇದು ಸಂಪೂರ್ಣ ಅಸಂವಿಧಾನಿಕವೆಂದು ನಾವು ಮೊದಲಿನಿಂದಲೂ ವಾದಿಸುತ್ತಿದ್ದೆವು. ಸಂವಿಧಾನದ ವಿಧಿಗಳಾದ 324 ರಿಂದ 327ರ ವರೆಗಿನ ಅಂಶಗಳು ಏನನ್ನು ಹೇಳುತ್ತವೆ ಎಂಬುದನ್ನು ಕಾನೂನು ತಜ್ಞರ ಮೂಲಕ ವಿಶ್ಲೇಷಿಸಿದ್ದೆವು. ಆದರೆ, ಮೇ 27 ರಂದು ಬಂದ ಸುಪ್ರೀಂ ಕೋರ್ಟ್ ತೀರ್ಪು ಚುನಾವಣಾ ಆಯೋಗದ ಈ ನಡೆಗೆ ಹಸಿರು ನಿಶಾನೆ ತೋರಿದೆ. ಅದು ಆಡಳಿತ ವ್ಯವಸ್ಥೆಗೆ ಅನುಕೂಲಕರವಾಗಿದ್ದರೆ, ದೇಶದ ಬಹುಸಂಖ್ಯಾತ ದುಡಿಯುವ ವರ್ಗ, ಬಡವರು, ಕೂಲಿ ಕಾರ್ಮಿಕರು, ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರಿಗೆ ಇದು ಅಪಾಯದ ಮುನ್ಸೂಚನೆಯಾಗಿ ಮಾರ್ಪಟ್ಟಿದೆ ಎಂದರು.



ನಮ್ಮದು ಸಾರ್ವತ್ರಿಕ ಚುನಾವಣಾ ವ್ಯವಸ್ಥೆ. 18 ವರ್ಷ ತುಂಬಿದ ಪ್ರತಿಯೊಬ್ಬ ನಾಗರಿಕನಿಗೂ ಲಿಂಗ, ಧರ್ಮ, ಜಾತಿ, ಭಾಷೆಯ ತಾರತಮ್ಯವಿಲ್ಲದೆ ಮತದಾನದ ಹಕ್ಕನ್ನು ಸಂವಿಧಾನ ಖಾತರಿಪಡಿಸಿದೆ. ಆದರೆ ಇಂದಿನ ಪರಿಸ್ಥಿತಿ ಬದಲಾಗಿದೆ. ಹಿಂದೆ ದೇಶದ ಮತದಾರರು ತಮಗೆ ಬೇಕಾದ ಸರ್ಕಾರವನ್ನು ಆರಿಸುತ್ತಿದ್ದರು, ಆದರೆ ಈಗ ಸರ್ಕಾರ ನಡೆಸುವ ಪಕ್ಷಗಳು ತಮಗೆ ಬೇಕಾದ ಮತದಾರರನ್ನು ಆಯ್ಕೆ ಮಾಡಿಕೊಳ್ಳುತ್ತಿವೆ ಎಂದು ಆರೋಪಿಸಿದರು.

ಚುನಾವಣಾ ಆಯೋಗವು ಮತದಾರರ ಪಟ್ಟಿಯ ಶುದ್ಧೀಕರಣ (ಮರಣ ಹೊಂದಿದವರ, ದ್ವಿಪ್ರತಿ ಇರುವವರ ಹೆಸರು ತೆಗೆಯುವುದು) ಮಾಡುತ್ತಿದ್ದೇವೆಂದು ಹೇಳಿಕೊಳ್ಳುತ್ತಿದೆ. ಆದರೆ, ಈ ಶುದ್ಧೀಕರಣದ ಅಡಿಯಲ್ಲಿ ಧ್ವನಿ ಇಲ್ಲದವರನ್ನು, ಆಸ್ತಿ ಮತ್ತು ಶಿಕ್ಷಣ ಇಲ್ಲದವರನ್ನು ಪಟ್ಟಿಯಿಂದ ಹೊರಗಿಡಲಾಗುತ್ತಿದೆ. ಆಯೋಗವು ಕೇಳುತ್ತಿರುವ 11 ದಾಖಲೆಗಳು ದೇಶದ ಸಾಮಾನ್ಯ ಜನಸಾಮಾನ್ಯರ ಬಳಿ ಇರಲು ಸಾಧ್ಯವೇ ಇಲ್ಲ. ವಲಸೆ ಕಾರ್ಮಿಕರು, ತೀರಾ ಬಡವರು ಮತ್ತು ಶಿಕ್ಷಣ ವಂಚಿತರ ಬಳಿ ಇಂತಹ ದಾಖಲೆಗಳು ಸಿಗುವುದಿಲ್ಲ. ಸ್ವತಃ ಚುನಾವಣಾ ಆಯೋಗ ನೀಡಿದ ವೋಟರ್ ಐಡಿ ಮತ್ತು ದೇಶದ ಕಡ್ಡಾಯ ದಾಖಲೆಯಾದ ಆಧಾರ್ ಕಾರ್ಡ್‌ಗಳನ್ನೇ ಪೌರತ್ವ ಅಥವಾ ಮತದಾನದ ಅರ್ಹತೆಗೆ ಮಾನ್ಯ ಮಾಡುತ್ತಿಲ್ಲ. ಮದುವೆಯಾಗಿ ಬೇರೊಂದು ಊರಿಗೆ ಹೋಗುವ ಮಹಿಳೆಯರು ತಮ್ಮ ತಂದೆ–ತಾಯಿಯ ದಾಖಲೆಗಳನ್ನು ಒದಗಿಸಲಾಗದೆ ಮತದಾನದ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಮತದಾರರನ್ನು ಚುನಾವಣಾ ಪ್ರಕ್ರಿಯೆಯಿಂದ ಹೊರದಬ್ಬಲು ಆಯೋಗವು ತಾತ್ವಿಕ ವ್ಯತ್ಯಾಸ ಅಥವಾ ಅಸ್ತಂಗತ ವಿವರಗಳ ನೆಪವನ್ನು ಬಳಸಿಕೊಳ್ಳುತ್ತಿದೆ. ಹೆಸರುಗಳ ಉಚ್ಚಾರಣೆಯಲ್ಲಿನ ಸಣ್ಣ ವ್ಯತ್ಯಾಸ, ಬದಲಾವಣೆ ಅಥವಾ ತಾಯಿ ಮತ್ತು ಮಗುವಿನ ವಯಸ್ಸಿನ ನಡುವಿನ ತಾಂತ್ರಿಕ ವ್ಯತ್ಯಾಸಗಳನ್ನು ಮುಂದಿಟ್ಟುಕೊಂಡು ಮತದಾರರನ್ನು ಪಟ್ಟಿಗೆ ಸೇರಿಸಿ, ಅಂತಿಮವಾಗಿ ಅವರ ಹೆಸರುಗಳನ್ನು ಕೈಬಿಡಲಾಗುತ್ತಿದೆ. ತಂತ್ರಜ್ಞಾನ ಮುಂದು

» ನಾಲ್ಕನೇ ಪುಟದಲ್ಲಿ

### ಜೂ. 22ಕ್ಕೆ ಡಿಸಿಗೆ ನಿರ್ಣಯ ಸಲ್ಲಿಕೆ

ಈ ಗಂಭೀರ ಪರಿಸ್ಥಿತಿಯನ್ನು ಎದುರಿಸಲು ನಾಗರಿಕ ಸಮಾಜ ಮತ್ತು ರಾಜಕೀಯ ಪಕ್ಷಗಳು ತಕ್ಷಣವೇ ಜಾಗೃತರಾಗಬೇಕಿದೆ. ಸರ್ಕಾರವು ನಮಗೆ ಬೇರೆಲ್ಲಾ ಗ್ಯಾರಂಟಿಗಳನ್ನು ನೀಡುತ್ತಿರುವಂತೆ ಮತದಾನ ಹಕ್ಕಿನ ಗ್ಯಾರಂಟಿ ನೀಡಬೇಕು. ಪ್ರತಿ ಬೂತ್ ಮಟ್ಟದಲ್ಲಿ ಆಯೋಗವು ಸಹಾಯ ಕೇಂದ್ರಗಳನ್ನು ತೆರೆದು ಸಾಮಾನ್ಯ ಜನರಿಗೆ ಅಗತ್ಯ ದಾಖಲೆಗಳನ್ನು ಒದಗಿಸಲು ಸಹಾಯ ಮಾಡಬೇಕು. ಪ್ರತಿಯೊಬ್ಬ ನಾಗರಿಕನೂ ತನ್ನ ಮತದಾನದ ಹಕ್ಕು ಸುರಕ್ಷಿತವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ವ್ಯಾಪಕವಾದ ಜನ ಚಳವಳಿ ರೂಪಿಸಬೇಕಿದೆ. ಈಗ ಮೈಮರೆತರೆ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲವೆಂಬುದನ್ನು ಎಲ್ಲರೂ ಮನಗಾಣಬೇಕೆಂದರು. ದುಂಡು ಮೇಜಿನ ಸಭೆಯ ನಿರ್ಣಯ ಗಳನ್ನು ಜೂ.22ರಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರಿಗೆ ಸಲ್ಲಿಸಲು ನಿರ್ಧರಿಸಲಾಯಿತು.

# ಚಂದನವನಕ್ಕೆ ಪರಭಾಷಾ ಚಿತ್ರಗಳ ಪೈಪೋಟಿ

## ಟಾಯ್ ಸ್ಟೋರಿ 5, ಮಾ ಇಂತಿ ಬಂಗಾರಂ ಮತ್ತು ಇನ್ನಷ್ಟು










ಟಾಯ್ ಸ್ಟೋರಿ 5 ರಿಂದ ಮಾ ಇಂತಿ ಬಂಗಾರಂ ವರೆಗೆ, ಈ ವಾರ ಎಲ್ಲಾ ಭಾಷೆಗಳಲ್ಲಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಚಿತ್ರಗಳ ಪಟ್ಟಿ ಇಲ್ಲಿದೆ.

**1. ಟಾಯ್ ಸ್ಟೋರಿ 5: ಇಂಗ್ಲಿಷ್, ಜೂನ್ 19:** ಮಕ್ಕಳ ಗಮನವು ಸಾಂಪ್ರದಾಯಿಕ ಆಟದ ವಸ್ತುಗಳಿಂದ ಸಮಕಾಲೀನ ತಂತ್ರಜ್ಞಾನದತ್ತ ಸಾಗುತ್ತಿದ್ದಂತೆ, ಆಟಿಕೆಗಳು ಹೊಸ ರೀತಿಯ ತೊಂದರೆಯನ್ನು ಎದುರಿಸುತ್ತವೆ. ಬಜ್, ವುಡಿ, ಜೆಸ್ಸಿ ಮತ್ತು ಗುಂಪು ಸ್ಮಾರ್ಟ್ ಸಾಧನಗಳು ಮತ್ತು ಡಿಜಿಟಲ್ ಗೊಂದಲಗಳೊಂದಿಗೆ ಸ್ಪರ್ಧಿಸುತ್ತಿರುವಾಗ ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಆಟಿಕೆಯಾಗುವುದರ ಅರ್ಥವನ್ನು ನಿಜವಾಗಿಯೂ ಎದುರಿಸಬೇಕಾಗುತ್ತದೆ. ಹೊಂದಿಕೊಳ್ಳುವುದು ಎಂದರೆ ನೀವು ಯಾರೆಂದು ತ್ಯಜಿಸುವುದು ಎಂದಲ್ಲ; ಬದಲಾಗಿ, ಹಳೆಯ ಸ್ನೇಹಗಳನ್ನು ಪರೀಕ್ಷೆಗೆ ಒಳಪಡಿಸಿದಾಗ ಮತ್ತು ಹೊಸ ಉದ್ದೇಶ ಕಂಡುಬಂದಾಗ ಹೊಂದಿಕೊಳ್ಳಲು ಹೊಸ ಮಾರ್ಗಗಳನ್ನು ಕಂಡುಕೊಳ್ಳುವುದು ಎಂದರ್ಥ ಎಂದು ಆಟಿಕೆಗಳು ಕಲಿಯುತ್ತವೆ.

**ಪಾತ್ರವರ್ಗ: ಟಾಮ್ ಹ್ಯಾಂಕ್ಸ್, ಟಿಮ್ ಅಲೆನ್.**

**ನಿರ್ದೇಶಕ: ಆಂಡ್ರ್ಯೂ ಸ್ಟಾಂಟನ್.**

**2. ದಿ ಫ್ಯೂರಿಯಸ್: ಇಂಗ್ಲಿಷ್, ಜೂನ್ 19:** ಕ್ರೂರ ಅಪಹರಣಕಾರರು ತನ್ನ ಮಗಳನ್ನು ಕರೆದೊಯ್ದ ನಂತರ, ತಂದೆ ತನ್ನ ಮಗಳನ್ನು ಮನೆಗೆ ಕರೆತರಲು ಏನು ಬೇಕಾದರೂ ಮಾಡುತ್ತಾರೆ.

**ಪಾತ್ರವರ್ಗ: ಮಿಯಾವೊಕ್ಸಿ, ಜೋ ತಸ್ಲಿಮ್.**

**ನಿರ್ದೇಶಕ: ಕೆಂಜಿ ತನಿಗಕಿ.**

**3. ಕಾಕ್‌ಟೇಲ್ 2: ಹಿಂದಿ, ಜೂನ್ 19:** ಇದು ಕುನಾಲ್, ದಿಯಾ ಮತ್ತು ಆಲಿ ಮೇಲೆ ಸಮಕಾಲೀನ ತ್ರಿಕೋನ ಪ್ರೇಮಕಥೆಯ ಮೇಲೆ ಕೇಂದ್ರೀಕೃತವಾಗಿದೆ. ಬಿಸಿಲಿನ ಇಟಲಿಯಲ್ಲಿ ನಡೆಯುವ ಈ ನಾಟಕವು ಆನಂದದಾಯಕ ರಸ್ತೆ ಪ್ರಯಾಣಗಳಿಂದ ಹೃದಯ ನೋವಿನವರೆಗೆ ಭಾವನಾತ್ಮಕ ಕುಸಿತವನ್ನು ಅನುಸರಿಸುತ್ತದೆ, ಹತ್ತು ವರ್ಷಗಳ ಸಂಬಂಧವು ಹಿಂದಿನ ಮಾದರಿಗಳು ಸ್ನೇಹ ಮತ್ತು ವ್ಯಾಮೋಹವನ್ನು ಸಂಯೋಜಿಸಿದಾಗ ಕೊನೆಗೊಳ್ಳುತ್ತದೆ.

**ಪಾತ್ರವರ್ಗ: ಶಾಹಿದ್ ಕಪೂರ್, ಕೃತಿ ಸನೋನ್, ರಶ್ಮಿಕಾ ಮಂದಣ್ಣ.**

**ನಿರ್ದೇಶಕ: ಹೋಮಿ ಅದಜಾನಿಯಾ.**

**4. ನೂರು ಸಾಮಿ: ತಮಿಳು, ಜೂನ್ 19:** ಸಾಂಪ್ರದಾಯಿಕ ಹಳ್ಳಿಯಲ್ಲಿ, ವಿಧವೆ ತಾಯಿಯಾದ ಸೆಲ್ವಿ ತನ್ನ ಇಬ್ಬರು ಗಂಡು ಮಕ್ಕಳನ್ನು ಬೆಳೆಸಲು ತನ್ನ ಜೀವನವನ್ನು ಮುಡಿಪಾಗಿಡುತ್ತಾಳೆ. ವರ್ಷಗಳ ನಂತರ, ಅವಳ ಅತೃಪ್ತ ಜೀವನವು ಮತ್ತೆ ಹುಟ್ಟುತ್ತದೆ, ದೀರ್ಘಕಾಲದ ಪದ್ಧತಿಗಳನ್ನು ಮೇಲಕ್ಕೆತ್ತುತ್ತದೆ. ಸೆಲ್ವಿ ತನ್ನ ವೈಯಕ್ತಿಕ ಸಂತೋಷ ಮತ್ತು ಸಾಂಸ್ಕೃತಿಕ ನಿರೀಕ್ಷೆಗಳ ನಡುವೆ ನಿರ್ಧರಿಸಬೇಕಾಗುತ್ತದೆ ಏಕೆಂದರೆ ಅವಳ ಕುಟುಂಬ ಮತ್ತು ಸಮಾಜವು ಬದಲಾವಣೆಯನ್ನು ತೀವ್ರವಾಗಿ ವಿರೋಧಿಸುತ್ತದೆ.

**ಪಾತ್ರವರ್ಗ: ಸ್ವಾಸಿಕಾ, ವಿಜಯ್ ಆಂಟನಿ, ಅಜಯ್ ಧಿಶನ್.**

**ನಿರ್ದೇಶಕ: ಶಶಿ.**

**5. ಮಾ ಇಂತಿ ಬಂಗಾರಮ್: ತೆಲುಗು, ಜೂನ್ 19:** ರಹಸ್ಯ ಭೂತಕಾಲ ಹೊಂದಿರುವ ಮಹಿಳೆಯನ್ನು ಸಾಂಪ್ರದಾಯಿಕ ಮನೆಯಲ್ಲಿ ಒಪ್ಪಿಕೊಳ್ಳುವುದು ಕಷ್ಟ. ತನ್ನ ಹಿಂದಿನ ಜೀವನದಿಂದ ಅಪಾಯ ಮತ್ತೆ ಬಂದಾಗ ಸತ್ಯವನ್ನು ಬಹಿರಂಗಪಡಿಸದೆ, ತನ್ನ ಬಗ್ಗೆ ಅನುಮಾನ ಹೊಂದಿರುವ ಕುಟುಂಬವನ್ನೇ ಅವಳು ಸಮರ್ಥಿಸಿಕೊಳ್ಳಬೇಕು.

**ಪಾತ್ರವರ್ಗ: ಸಮಂತಾ, ದಿಗಂತ್ ಮಂಚಾಲೆ.**

**ನಿರ್ದೇಶಕ: ನಂದಿನಿ ರೆಡ್ಡಿ.**

**6. ಬಾಲನ್: ದಿ ಬಾಯ್: ಮಲಯಾಳಂ, ಜೂನ್ 19:** ಸತ್ಯ ಮತ್ತು ಪ್ರಾಯಶ್ಚಿತ್ತದ ಹೃದಯಸ್ಪರ್ಶಿ ಅನ್ವೇಷಣೆಯಲ್ಲಿ ತಾಯಿ ಮತ್ತು ಮಗ ತಮ್ಮ ಹಿಂದಿನ ರಹಸ್ಯಗಳನ್ನು ಎದುರಿಸಬೇಕಾಗುತ್ತದೆ ಏಕೆಂದರೆ ಅವರು ವಿಧಿಯಿಂದ ಬೇರ್ಪಟ್ಟಿದ್ದಾರೆ, ಪ್ರೀತಿಯಿಂದ ಬಂಧಿಸಲ್ಪಟ್ಟಿದ್ದಾರೆ ಮತ್ತು ಸುಳ್ಳುಗಳಿಂದ ರಕ್ಷಿಸಲ್ಪಟ್ಟಿದ್ದಾರೆ.


**ಪಾತ್ರವರ್ಗ: ಫರ್ಜಾನಾ ಪಾಲಥಿಂಗಲ್, ಆದಿಶೇಷನ್ ಕೆ.ಆರ್.**

**ನಿರ್ದೇಶಕ: ಚಿದಂಬರಂ.**

**7. ಚಿನ್ನ ಚಿನ್ನ ಆಸೆ: ಮಲಯಾಳಂ/ತಮಿಳು, ಜೂನ್ 19:** ವಾರಣಾಸಿಯ ಪ್ರಾಚೀನ ಘಾಟ್‌ಗಳಲ್ಲಿ ಇಬ್ಬರು ಅಪರಿಚಿತರು ಆಕಸ್ಮಿಕವಾಗಿ ಭೇಟಿಯಾಗುತ್ತಾರೆ ಮತ್ತು ನದಿಯ ಬಳಿ ಮೂಲಭೂತ ಊಟಗಳನ್ನು ಮಾಡುತ್ತಾ, ಒಟ್ಟಿಗೆ ಅಡ್ಡಾಡುತ್ತಾ ಮತ್ತು ಶಾಂತಿಯುತವಾಗಿ ಹರಟೆ ಹೊಡೆಯುತ್ತಾ ದಿನವನ್ನು ಕಳೆಯುತ್ತಾರೆ. ದಿನ ಮುಗಿದ ಬಹಳ ಸಮಯದ ನಂತರ, ಕಾಕತಾಳೀಯವಾಗಿ ಪ್ರಾರಂಭ ವಾಗುವ ಸಂಬಂಧವು ಕ್ರಮೇಣ ಮಾತನಾಡದ ಸಂಬಂಧವಾಗಿ ಬೆಳೆಯುತ್ತದೆ.

**ಪಾತ್ರವರ್ಗ: ಮಧು, ಇಂದ್ರನ್ಸ್.**

**ನಿರ್ದೇಶಕ: ವರ್ಷಾ ವಾಸುದೇವ್.**



**8. ಹಿಂದ್ ರಜಬ್‌ನ ಧ್ವನಿ: ಹೀಬ್ರೂ, ಜೂನ್ 19:** ದುರಂತ ಸತ್ಯಕಥೆಯನ್ನು ಆಧರಿಸಿದ ಈ ಚಿತ್ರವು, ಗಾಜಾದಲ್ಲಿ ನಡೆದ ಹೋರಾಟದ ಸಮಯದಲ್ಲಿ ಕಾರಿನೊಳಗೆ ಸಿಲುಕಿಕೊಂಡಿದ್ದ ಆರು ವರ್ಷದ ಮಗುವನ್ನು ಬಿಡುಗಡೆ ಮಾಡಲು ತುರ್ತು ಸಿಬ್ಬಂದಿ ಮಾಡುವ ಉದ್ರಿಕ್ತ ಪ್ರಯತ್ನಗಳ ಮೇಲೆ ಕೇಂದ್ರೀಕೃತವಾಗಿದೆ. ಸಹಾಯಕ್ಕಾಗಿ ಆಕೆಯ ಕೂಗು ಶೌರ್ಯ, ಭರವಸೆ ಮತ್ತು ಯುದ್ಧದ ಮಾನವ ವೆಚ್ಚದ ಪ್ರಬಲ ಸ್ಮಾರಕವಾಗುತ್ತದೆ, ಏಕೆಂದರೆ ಅವರು ಅವಳನ್ನು ತಲುಪಲು ಸಮಯದ ವಿರುದ್ಧ ಓಡುತ್ತಾರೆ.

**ಪಾತ್ರವರ್ಗ: ಸಜಾ ಕಿಲಾನಿ, ಮೋಟಾಜ್ ಮಲ್ಹೀಸ್.**

**ನಿರ್ದೇಶಕ: ಕೌಥರ್ ಬೆನ್ ಹನಿಯಾ.**

**9. ಡಾರ್ಕ್ ಜೈಂಟ್: ತಮಿಳು, ಜೂನ್ 19:** ಇದು ಅಲೌಕಿಕ ಭಯಾನಕ ಅಂಶಗಳನ್ನು ಹೊಂದಿರುವ ಮಾನಸಿಕ ಕೌಟುಂಬಿಕ ನಾಟಕವಾಗಿದೆ. ಪೀಳಿಗೆಯ ಆಘಾತ, ಪಶ್ಚಾತ್ತಾಪ ಮತ್ತು ದುರಾಸೆ ಅಕ್ಷರಶಃ ಕುಟುಂಬವನ್ನು ಒಳಗಿನಿಂದ ನಾಶಮಾಡುವ ಶಾಪವಾಗಿ ಹೇಗೆ ಬದಲಾಗುತ್ತದೆ ಎಂಬುದನ್ನು ಇದು ನೋಡುತ್ತದೆ.

**ಪಾತ್ರವರ್ಗ: ಸೋನಿಯಾ ಅಗರ್ವಾಲ್, ಲಿವಿಂಗ್ಸ್ಟನ್.**

**ನಿರ್ದೇಶಕ: ಕೆ.ಎಸ್. ಕಿಶಾನ್.**

**10. ಮಕ್ಕಳ್ ತಲೈವಾ: ತಮಿಳು, ಜೂನ್ 19:** ಈ ರಾಜಕೀಯ ಹಾಸ್ಯ-ನಾಟಕದಲ್ಲಿ, ಅಧಿಕಾರ, ಮಹತ್ವಾಕಾಂಕ್ಷೆ ಮತ್ತು ಸಾರ್ವಜನಿಕ ಜೀವನದ ಅಸಂಬದ್ಧತೆಗಳ ಬಗ್ಗೆ ಮಾತು ಕತೆ ನಡೆಸುತ್ತಿರುವ ರಾಜಕಾರಣಿಗಳ ಗುಂಪನ್ನು ಅನುಸರಿಸಲಾಗುತ್ತದೆ, ಇದು ಹಲವಾರು ಮೋಜಿನ ಮತ್ತು ಆಶ್ಚರ್ಯಕರ ಸನ್ನಿವೇಶಗಳಿಗೆ ಕಾರಣವಾಗುತ್ತದೆ.

**ಪಾತ್ರವರ್ಗ: ರವಿ ಮರಿಯಾ, ರಾಧಾ ರವಿ.**

**ನಿರ್ದೇಶಕ: ರಾಮ್‌ದೇವ್.**

**11. ವಸಾಹತು: ಕೊರಿಯನ್, ಜೂನ್ 19:** ವೇಗವಾಗಿ ವಿಕಸನಗೊಳ್ಳುತ್ತಿರುವ ವೈರಸ್ ಬಿಡುಗಡೆಯಾದಾಗ, ಪ್ರಾಧ್ಯಾಪಕರೊಬ್ಬರು ಭಾಗವಹಿಸುತ್ತಿರುವ ಬಯೋಟೆಕ್ ಸಮ್ಮೇಳನವು ದುಃಸ್ವಪ್ನವಾಗುತ್ತದೆ. ಕಾಯಿಲೆ ಹರಡಿ ಜನರು ಬದಲಾಗಲು ಪ್ರಾರಂಭಿಸಿದಾಗ ಸೌಲಭ್ಯವು ಸ್ಥಗಿತಗೊಳ್ಳುತ್ತದೆ, ಎಲ್ಲರೂ ಬದುಕುಳಿಯುವ ಹೋರಾಟದಲ್ಲಿದ್ದಾರೆ.

**ಪಾತ್ರವರ್ಗ: ಜುನ್ ಜಿ-ಹ್ಯುನ್, ಕೂ ಕ್ಯೋ-ಹ್ವಾನ್.**

**ನಿರ್ದೇಶಕ: ಸಾಂಗ್-ಹೋ ಯೆಯೋನ್.**

**12. ಕಳಿಂಗದ ರಹಸ್ಯ: ಮಲಯಾಳಂ, ಜೂನ್ 18:** ಹೊಸ ವರ್ಷದ ಮುನ್ನಾದಿನದಂದು, ಕಾಲೇಜು ವಿದ್ಯಾರ್ಥಿಗಳ ಗುಂಪೊಂದು ಹೂತುಹೋದ ಬಾವಿಯಿಂದ ಹಳೆಯ ಚೈತನ್ಯವನ್ನು ಉದ್ದೇಶಪೂರ್ವಕವಾಗಿ ಜಾಗೃತಗೊಳಿಸುತ್ತಾರೆ, ಇದು ವಿಲಕ್ಷಣ ಮತ್ತು ಹಾಸ್ಯಮಯ ಘಟನೆಗಳ ಸರಣಿಯನ್ನು ಪ್ರಾರಂಭಿಸುತ್ತದೆ. ರಹಸ್ಯವು ಬಹಿರಂಗಗೊಳ್ಳುತ್ತಿದ್ದಂತೆ ಕ್ಯಾಂಪಸ್‌ನಲ್ಲಿ ಫ್ಯಾಂಟಸಿ, ಹಾಸ್ಯ ಮತ್ತು ಸಾಹಸದ ಹಗುರವಾದ ಮಿಶ್ರಣ ನಡೆಯುತ್ತದೆ.

**ಪಾತ್ರವರ್ಗ: ಧ್ಯಾನ್ ಶ್ರೀನಿವಾಸನ್, ಅಲ್ತಾಫ್ ಸಲೀಂ.**

**ನಿರ್ದೇಶಕ: ಸನೀಶ್ ಉನ್ನಿಕೃಷ್ಣನ್.**

**13. ವರ್ಗಾವಣೆ ತ್ರಿಮೂರ್ತಿಲು: ತೆಲುಗು, ಜೂನ್ 19:** ಪ್ರಾಮಾಣಿಕ ಮತ್ತು ಧೈರ್ಯಶಾಲಿ ಕಾನ್‌ಸ್ಟೆಬಲ್ ಆಗಿರುವ ತ್ರಿಮೂರ್ತುಲು, ಯಾವುದೇ ಬೆಲೆ ತೆತ್ತಾದರೂ ಅನ್ಯಾಯವನ್ನು ಎದುರಿಸುವುದಕ್ಕೆ ಹೆಸರುವಾಸಿಯಾಗಿದ್ದಾರೆ. ಆಕಸ್ಮಿಕ ಆವಿಷ್ಕಾರವೊಂದು ಅವನನ್ನು ದೀರ್ಘಕಾಲ ಮರೆತುಹೋದ ನಿಗೂಢತೆಯೊಳಗೆ ಎಳೆದಾಗ, ಸತ್ಯವನ್ನು ಮರೆಮಾಚಲು ದೃಢನಿಶ್ಚಯ ಹೊಂದಿರುವ ಬಲವಾದ ಶಕ್ತಿಗಳನ್ನು ಅವನು ಎದುರಿಸಬೇಕಾಗುತ್ತದೆ. ಆಕ್ಷನ್, ಸಸ್ಪೆನ್ಸ್, ಹಾಸ್ಯ ಮತ್ತು ಭಾವನೆಗಳನ್ನು ಸಂಯೋಜಿಸುವ ಈ ನಿರೂಪಣೆಯು, ಅಗಾಧ ಸಂದರ್ಭಗಳ ನಡುವೆಯೂ ನ್ಯಾಯಕ್ಕಾಗಿ ಅವನ ದೃಢ ಅನ್ವೇಷಣೆಯನ್ನು ವಿವರಿಸುತ್ತದೆ.

**ಪಾತ್ರವರ್ಗ: ವಡ್ಡೆ ನವೀನ್, ರಾಶಿ ಸಿಂಗ್.**

**ನಿರ್ದೇಶಕ: ಕಮಲ್ ತೇಜ ನಾರ್ಲಾ.**

**14. ದೀವಾನ: ತೆಲುಗು, ಜೂನ್ 19:** ವಿಶಿಷ್ಟ ವಾತಾವರಣದ ವಿಶಿಷ್ಟ ಹುಡುಗ ಮುನ್ನಾ, ಸಾಧಿಸಲಾಗದಂತೆ ಕಾಣುವ ಸೌಂದರ್ಯವನ್ನು ಗ್ರಹಿಸುತ್ತಾನೆ. ಅವನು ಅವಳಿಗೆ ಅರ್ಹನಾಗಲು ಹೋರಾಡುತ್ತಿರುವಾಗ ಅವಳು ಮೌನವಾಗಿ ಮುಂದುವರಿಯಲು ಕಲಿಯುತ್ತಿದ್ದಾಳೆ.

**ಪಾತ್ರವರ್ಗ: ಹರ್ಷಿತ್ ಆರ್, ಸ್ನೇಹಾ ಮಣಿಮೇಗಲೈ.**

**ನಿರ್ದೇಶಕ: ಶ್ರೀಕಾಂತ್ ಸಂಗಿಶೆಟ್ಟಿ.**



**15. ಎಲ್ ಜಿಬಿಟಿ : ಕಾನೂನು ಹೋರಾಟ: ತೆಲುಗು, ಜೂನ್ 19:** ಭಯಾನಕ ಅಪರಾಧದ ನಂತರ ನ್ಯಾಯಕ್ಕಾಗಿ ಟ್ರಾನ್ಸ್‌ಜೆಂಡರ್ ಮಹಿಳೆಯ ಹೋರಾಟವನ್ನು ಕೇಂದ್ರೀಕರಿಸುವ ಒಂದು ಮನಮುಟ್ಟುವ ನ್ಯಾಯಾಲಯದ ನಾಟಕ. ನ್ಯಾಯಾಂಗ ಹೋರಾಟ ಮುಂದುವರೆದಂತೆ ಪೂರ್ವಾಗ್ರಹ, ಅಧಿಕಾರ ಮತ್ತು ಸಾಂಸ್ಥಿಕ ಪಕ್ಷಪಾತವನ್ನು ಪರಿಶೀಲಿಸಲಾಗುತ್ತದೆ, ಇದು ಇಡೀ ಸಮಾಜವನ್ನು ವಿಚಾರಣೆಗೆ ಒಳಪಡಿಸುತ್ತದೆ. ಧೈರ್ಯ, ಗೌರವ ಮತ್ತು ನ್ಯಾಯಕ್ಕಾಗಿ ಅಚಲವಾದ ಅನ್ವೇಷಣೆಯ ರೋಮಾಂಚಕಾರಿ ಕಥೆ.

**ಪಾತ್ರವರ್ಗ: ಎಸ್ತರ್ ನೊರೊನ್ಹಾ, ರಾಜು ಖೇರ್.**

**ನಿರ್ದೇಶಕ: ಪಿ ಸುನೀಲ್ ಕುಮಾರ್ ರೆಡ್ಡಿ.**

**16. ದೊಡ್ಮಾನ್ಸ : ಕನ್ನಡ, ಜೂನ್ 19:** ನಟನಾಗಬೇಕೆಂಬ ಹಂಬಲ ಹೊಂದಿರುವ ಹಳ್ಳಿಯ ಯುವಕ ಶಿವು ಬೆಂಗಳೂರಿಗೆ ಸ್ಥಳಾಂತರಗೊಂಡು ಸ್ನೇಹಿತನ ಜೊತೆ ಆಟೋ ಚಾಲಕನಾಗಿ ಕೆಲಸ ಮಾಡುತ್ತಾನೆ. ವಿಫಲ ಚಲನಚಿತ್ರ ನಿರ್ಮಾಪಕ ದೇವು ತನ್ನ ಮೊದಲ ಚಿತ್ರದಲ್ಲಿ ಅವರನ್ನು ನಾಯಕಿಯರನ್ನಾಗಿ ಆಯ್ಕೆ ಮಾಡಿಕೊಂಡರೆ, ಅವನು ಮಹತ್ವಾಕಾಂಕ್ಷಿ ನಟಿ ಸ್ನೇಹಾಳನ್ನು ಪ್ರೀತಿಸುತ್ತಾನೆ, ಇದು ಅವರ ಕನಸುಗಳನ್ನು ಪರೀಕ್ಷೆಗೆ ಒಳಪಡಿಸುತ್ತದೆ ಮತ್ತು ನಿರ್ಮಾಪಕರೊಂದಿಗೆ ಘರ್ಷಣೆಗೆ ಕಾರಣವಾಗುತ್ತದೆ.

**ಪಾತ್ರವರ್ಗ: ಆರ್ ಶರತ್ ಕೃಷ್ಣ, ರೇಷ್ಮಾ ಲಿಂಗರಾಜಪ್ಪ.**

**ನಿರ್ದೇಶಕ: ಆರ್ ಶರತ್ ಕೃಷ್ಣ.**

**17. ಕಾಳಘಟ್ಟ: ಕನ್ನಡ, ಜೂನ್ 19:** ಇದು 1995 ರಿಂದ ಇಂದಿನವರೆಗೆ ನಡೆಯುವ ಎರಡು ಸಂಬಂಧಿತ ಕಥೆಗಳನ್ನು ಸಂಯೋಜಿಸುತ್ತದೆ.

**ಪಾತ್ರವರ್ಗ: ಅಭಿ ದಾಸ್, ಖುಷಿ ಪಿ.ಎಸ್.**

**ನಿರ್ದೇಶಕ: ಕೆ ಪ್ರಕಾಶ್ ಅಂಬಾಳೆ.**


**18. ಉರಬ್ಬ: ಕನ್ನಡ, ಜೂನ್ 19:** ವರ್ಣರಂಜಿತ ಉಜ್ಜನಿ ಚೌಡೇಶ್ವರಿ ದೇವಿ ಉತ್ಸವದ ಸಮಯದಲ್ಲಿ ವಿವಿಧ ಜೀವಗಳು ಅನಿರೀಕ್ಷಿತವಾಗಿ ಘರ್ಷಿಸಿದಾಗ ಪ್ರೀತಿ, ಹಾಸ್ಯ ಮತ್ತು ನಿಗೂಢತೆಯ ಕಥೆ ಬಹಿರಂಗಗೊಳ್ಳುತ್ತದೆ. ಈ ಸಮುದ್ರ ಯಾನವು ಉತ್ಸಾಹಭರಿತ ಆಚರಣೆಯ ಹಿನ್ನೆಲೆಯಲ್ಲಿ ಭಾವನೆ, ಒಳಸಂಚು ಮತ್ತು ಭಕ್ತಿಯನ್ನು ಸಂಯೋಜಿಸುತ್ತದೆ, ರಹಸ್ಯಗಳು ಬಹಿರಂಗಗೊಳ್ಳುತ್ತವೆ ಮತ್ತು ವಿಧಿಗಳು ಒಮ್ಮುಖವಾಗುತ್ತವೆ.

**ಪಾತ್ರವರ್ಗ: ನರೇಶ್ ಗೌಡ, ತನಿಶಾ ಕುಪ್ಪಂಡ.**

**ನಿರ್ದೇಶಕ: ಶಂಕರ್ ಲಕ್ಕಿ.**

**– ಜಯಭುವನೇಶ್ವರಿ** ಬಿ







# ಬಾಸ್ ಸಿನಿಮಾ ರಿಲೀಸ್‌ಗೆ ವಿರೋಧ; ಬೇಸರ ಹೊರಹಾಕಿದ ನಿರ್ದೇಶಕ

ಬಾಸ್ ಸಿನಿಮಾ ರಿಲೀಸ್‌ಗೆ ವಿರೋಧ ವ್ಯಕ್ತವಾಗಿದೆ. ಸಿನಿಮಾ ರಿಲೀಸ್ ಆಗಬಾರದು ಎಂದು ವಿಜಯಲಕ್ಷ್ಮೀ ದರ್ಶನ್ ಅವರು ಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಸಿನಿಮಾದ ಕಥೆ ರೇಣುಕಾಸ್ವಾಮಿ ಕೊಲೆ ಕೇಸ್ ಆಧರಿಸಿದೆ ಎಂಬ ಅನುಮಾನ ಇದೆ. ಈ ಕಾರಣಕ್ಕೆ ರಿಲೀಸ್‌ಗೆ ವಿರೋಧ ಇದೆ. ಈ ವಿಷಯವಾಗಿ ಸಿನಿಮಾದ ನಿರ್ದೇಶಕ ಲವ ಬೇಸರ ಹೊರಹಾಕಿದ್ದಾರೆ. ಈ ಮೊದಲು ಸೆಷನ್ಸ್ ಕೋರ್ಟ್‌ನಲ್ಲಿ ಬಾಸ್ ಸಿನಿಮಾಗೆ ತಡೆ ಕೋರಿ ವಿಜಯಲಕ್ಷ್ಮೀ ದರ್ಶನ್ ಸಲ್ಲಿಸಿದ ಅರ್ಜಿ ವಜಾಗೊಂಡಿತ್ತು. ಅದರಿಂದ ಚಿತ್ರತಂಡಕ್ಕೆ ಬಲ ಸಿಕ್ಕಂತೆ ಆಗಿತ್ತು. ಈಗ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಇದರಿಂದ ತಂಡ ಚಿಂತೆಗೆ ಒಳಗಾಗಿದೆ. ಈ ಬಗ್ಗೆ ಅವರು ಮಾತನಾಡಿದ್ದಾರೆ.

**– ಮಂಗಳ** ರಾಜಗೋಪಾಲ್




# ನನಗೆ ಇನ್ನೊಂದು ಚಾನ್ಸ್ ಕೊಡಿ



ತೆಲುಗು ಚಿತ್ರರಂಗದಲ್ಲಿ ಅವಕಾಶ ಕೇಳಿದ ದಿಗಂತ್

ಕನ್ನಡದ ಜನಪ್ರಿಯ ನಟ ದಿಗಂತ್, ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಆದರೆ ಇತ್ತೀಚೆಗೆ ಅವರಿಗೆ ದೊಡ್ಡ ಯಶಸ್ಸು ದೊರೆತಿಲ್ಲ. ಕೆಲ ದಿನಗಳ ಹಿಂದಷ್ಟೆ ಅವರದ್ದೇ ಸಿನಿಮಾ ಸಂಬಂಧಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿ, ಬಾಡಿಗೆ ಹಣದಿಂದ ಜೀವನ ನಿರ್ವಹಣೆ ಮಾಡುವಂತಾಗಿದೆ ಎಂದು ಹೇಳಿದ್ದರು. ಕನ್ನಡದಲ್ಲಿ ಅವಕಾಶಗಳು ಕಡಿಮೆ, ಪ್ರೇಕ್ಷಕರು ಸಿನಿಮಾ ನೋಡುತ್ತಿಲ್ಲ ಎಂಬ ನೋವನ್ನು ದಿಗಂತ್ ಅಂದು ತೋಡಿಕೊಂಡಿದ್ದರು. ಇದೀಗ ನಟ ದಿಗಂತ್ ಪರ ಭಾಷೆ ಸಿನಿಮಾ ಒಂದರಲ್ಲಿ ನಟಿಸಿದ್ದು, ಅಲ್ಲಿಯೇ ಮತ್ತೊಂದು ಸಿನಿಮಾ ಅವಕಾಶ ಕೊಡಿ ಎಂದು ಬಹಿರಂಗವಾಗಿ ಕೇಳಿದ್ದಾರೆ.

ದಿಗಂತ್ ಅವರು ಸಮಂತಾ ಋತ್ ಪ್ರಭು ನಟನೆಯ ಮಾ ಇಂಟಿ ಬಂಗಾರಂ ಸಿನಿಮಾದಲ್ಲಿ ನಟಿಸಿದ್ದಾರೆ. ಸಿನಿಮಾ ಇದೇ ಜೂನ್ 19ಕ್ಕೆ ಬಿಡುಗಡೆ ಆಗಲಿದೆ. ಮೊನ್ನೆಯಷ್ಟೆ (ಜೂನ್ 17) ಸಿನಿಮಾದ ಪ್ರೀ ರಿಲೀಸ್ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ನಟ ದಿಗಂತ್ ಸಹ ಭಾಗಿ ಆಗಿದ್ದರು. ಈ ವೇಳೆ ಅವರು ತೆಲುಗು ಚಿತ್ರರಂಗದಲ್ಲಿ ಮತ್ತೆ ಅವಕಾಶ ನೀಡುವಂತೆ ಕೇಳಿಕೊಂಡರು.

ನಾನು ಬೆಂಗಳೂರಿನವನು, ಕನ್ನಡ ಸಿನಿಮಾಗಳಲ್ಲಿ ನಟಿಸುತ್ತೀನಿ. ನನಗೆ ಈ ಸಿನಿಮಾನಲ್ಲಿ ನಟಿಸಲು ಅವಕಾಶ ಕೊಟ್ಟ ಎಲ್ಲರಿಗೂ ಧನ್ಯವಾದ. ವಿಶೇಷವಾಗಿ ನಿರ್ದೇಶಕಿ ನಂದಿನಿ ರೆಡ್ಡಿ ಹಾಗೂ ಸಮಂತಾ ಋತ್ ಪ್ರಭು ಅವರಿಗೆ ಧನ್ಯವಾದ. ನಾನು ಸಮಂತಾ ಅವರ ನಟನೆಯನ್ನು ಅವರು ಮಾಡುವ ಕೆಲಸವನ್ನು ನೋಡುತ್ತಾ ಪ್ರಶಂಸಿಸುತ್ತಾ ಬಂದವನು. ನಂದಿನಿ ಮತ್ತು ಸಮಂತಾರ ಓಹ್ ಬೇಬಿ ನನಗೆ ಬಹಳ ಇಷ್ಟ ಎಂದ ದಿಗಂತ್, ಮಾ ಇಂಟಿ ಬಂಗಾರಂ ಸಿನಿಮಾಕ್ಕೆ ಕೆಲಸ ಮಾಡಿದ ಪ್ರಮುಖ ತಂತ್ರಜ್ಞರು ನಿರ್ಮಾಪಕರು, ಎಕ್ಸಿಕ್ಯೂಟಿವ್ ನಿರ್ಮಾಪಕರುಗಳ ಹೆಸರು ಹೇಳಿ ಎಲ್ಲರಿಗೂ ಧನ್ಯವಾದ ಹೇಳಿದರು.

ಬಳಿಕ ಭಾಷಣ ಮುಗಿಸುವಾಗ, ನನಗೆ ಮತ್ತೆ ಅವಕಾಶ ನೀಡುತ್ತೀರ ತಾನೇ? ಎಂದು ಪ್ರಶ್ನಿಸಿದರು. ಹಲವರು ಇದಕ್ಕೆ ಹೌದು ಎಂದರು. ಬಳಿಕ ದಿಗಂತ್,

> ಕೆಲ ದಿನಗಳ ಹಿಂದಷ್ಟೆ ಅವರದ್ದೇ ಸಿನಿಮಾ ಸಂಬಂಧಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ನಟ ದಿಗಂತ್, ಬಾಡಿಗೆ ಹಣದಿಂದ ಜೀವನ ನಿರ್ವಹಣೆ ಮಾಡುವಂತಾಗಿದೆ ಎಂದು ಹೇಳಿದ್ದರು. ಕನ್ನಡದಲ್ಲಿ ಅವಕಾಶಗಳು ಕಡಿಮೆ, ಪ್ರೇಕ್ಷಕರು ಸಿನಿಮಾ ನೋಡುತ್ತಿಲ್ಲ ಎಂಬ ನೋವನ್ನು ದಿಗಂತ್ ಅಂದು ತೋಡಿಕೊಂಡಿದ್ದರು. ಇದೀಗ ನಟ ದಿಗಂತ್ ಪರ ಭಾಷೆ ಸಿನಿಮಾ ಒಂದರಲ್ಲಿ ನಟಿಸಿದ್ದು, ಅಲ್ಲಿಯೇ ಮತ್ತೊಂದು ಸಿನಿಮಾ ಅವಕಾಶ ಕೊಡಿ ಎಂದು ಬಹಿರಂಗವಾಗಿ ಕೇಳಿದ್ದಾರೆ.

ನನ್ನನ್ನು ನಾನು ಪ್ರೂವ್ ಮಾಡಿಕೊಳ್ಳಲು ಇನ್ನೊಂದು ಅವಕಾಶ ಕೊಡಿ ಎಂದು ವೇದಿಕೆ ಮೇಲಿಂದ ಕೇಳಿ ಭಾಷಣ ಮುಗಿಸಿದರು.

ಅಸಲಿಗೆ ಬಹಳ ವರ್ಷಗಳ ಹಿಂದೆಯೇ ದಿಗಂತ್ ಅವರು ತೆಲುಗು ಸಿನಿಮಾ ಒಂದರಲ್ಲಿ ನಟಿಸಬೇಕಿತ್ತು. ವಿಜಯ್ ದೇವರಕೊಂಡ ಜೊತೆಗೆ ದಿಗಂತ್ ಬೈಕರ್‌ಗಳ ಬಗೆಗಿನ ಕತೆಯುಳ್ಳ ಸಿನಿಮಾ ಮಾಡಬೇಕಿತ್ತು. ಸಿನಿಮಾಕ್ಕಾಗಿ ತರಬೇತಿ ಸಹ ವಿಜಯ್ ದೇವರಕೊಂಡ ಜೊತೆ ಸೇರಿ ದಿಗಂತ್ ಮಾಡಿದ್ದರು ಆದರೆ ಆ ಸಿನಿಮಾ ಸೆಟ್ಟೇರಲಿಲ್ಲ. ಈಗ ಮಾ ಇಂಟಿ ಬಂಗಾರಂ ಸಿನಿಮಾ ಮೂಲಕ ತೆಲುಗಿಗೆ ಹೋಗಿದ್ದಾರೆ. ಅವರು ಕೇಳಿ ಕೊಂಡಂತೆ ತೆಲುಗು ಸಿನಿಮಾ ಅವಕಾಶಗಳು ಸಿಗುತ್ತವೆಯೇ ಕಾದು ನೋಡಬೇಕಿದೆ.

**– ಮಂಜುನಾಥ** ಸಿ.

# ಶರ್ಮಿಳಾ ಮಾಂಡ್ರೆ ಮದುವೆ ಸುದ್ದಿ ಕೇಳಿ ಹಾರ್ಟ್ ಬ್ರೇಕ್ ಎಮೋಜಿ ಹಾಕಿದ ಪವನ್ ಕುಮಾರ್



ಬಹುಭಾಷಾ ನಟಿ ಶರ್ಮಿಳಾ ಮಾಂಡ್ರೆ ಸದ್ಯದಲ್ಲೇ ವೈವಾಹಿಕ ಜೀವನಕ್ಕೆ ಕಾಲಿಡಲಿದ್ದಾರೆ. ತಮಿಳಿನ ಖ್ಯಾತ ಚಿತ್ರ ನಿರ್ಮಾಪಕ ಸುಧನ್ ಸುಂದರಂ ಅವರೊಂದಿಗೆ ಮುಂದಿನ ವಾರ ಶರ್ಮಿಳಾ ಅವರ ನಿಶ್ಚಿತಾರ್ಥ ನೆರವೇರಲಿದೆ ಎಂಬ ಸುದ್ದಿ ಗಾಂಧಿನಗರದಲ್ಲಿ ಸಖತ್ ಸೌಂಡ್ ಮಾಡುತ್ತಿದೆ. ಆದರೆ, ಈ ಸಂತಸದ ಸುದ್ದಿ ಹೊರಬೀಳುತ್ತಿದ್ದಂತೆ ಇತ್ತ ಪ್ರಖ್ಯಾತ ನಿರ್ದೇಶಕ, ನಟ ಪವನ್ ಕುಮಾರ್ ಅವರಿಗೆ ಹಾರ್ಟ್ ಬ್ರೇಕ್ ಆಗಿದೆ. ಹೌದು, ಶರ್ಮಿಳಾ ಮಾಂಡ್ರೆ ಅವರ ಮದುವೆ ಸುದ್ದಿ ಕಿವಿಗೆ ಬೀಳುತ್ತಿದ್ದಂತೆ ಪವನ್ ಕುಮಾರ್ ತಮ್ಮದೇ ಶೈಲಿಯಲ್ಲಿ ತಮಾಷೆಯ ವಿಡಿಯೋವೊಂದು ಈಗ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದು, ವೈರಲ್ ಆಗಿದೆ.

**ಏನಿದು ಗಾಳಿಪಟ 2 ಕನೆಕ್ಷನ್?:** ನಿರ್ದೇಶಕ ಯೋಗರಾಜ್ ಭಟ್ ಅವರ ಗಾಳಿಪಟ 2 ಸಿನಿಮಾದಲ್ಲಿ ಪವನ್ ಕುಮಾರ್ ಮತ್ತು ಶರ್ಮಿಳಾ ಮಾಂಡ್ರೆ ಜೊತೆಯಾಗಿ ನಟಿಸಿದ್ದರು. ಚಿತ್ರದಲ್ಲಿ ಶರ್ಮಿಳಾ ಅವರನ್ನು ಪವನ್ ಜೀವಕಿಂತ ಹೆಚ್ಚಾಗಿ ಪ್ರೀತಿಸುತ್ತಾರೆ. ಆದರೆ, ಶರ್ಮಿಳಾ ಬೇರೆಯವರನ್ನು ಮದುವೆಯಾಗಿ ಪವನ್ ಅವರ ಹೃದಯ ಒಡೆಯುತ್ತಾರೆ. ಇದೀಗ ನಿಜ ಜೀವನದಲ್ಲೂ ಶರ್ಮಿಳಾ ತಮಿಳು ನಿರ್ಮಾಪಕನ ಕೈ ಹಿಡಿಯುತ್ತಿರುವುದಕ್ಕೆ, ಪವನ್ ಕುಮಾರ್ ಸಿನಿಮಾ ಶೈಲಿಯಲ್ಲೇ ರೀಲ್ಸ್ ಮಾಡಿ ಕಾಲೆಳೆದಿದ್ದಾರೆ.

**– ರಾಜೇಶ್** ದುಗ್ಗುಮನೆ

# ಎಸ್.ಐ.ಆರ್. ಕಾರ್ಯ ಜವಾಬ್ದಾರಿಯಿಂದ ನಿರ್ವಹಿಸಿ

## ತರಬೇತಿ ಕಾರ್ಯಾಗಾರದಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೇಲೂರಿನ ವೀರಶೈವ ಸಮುದಾಯ ಭವನದಲ್ಲಿ ಗುರುವಾರ ಚುನಾಯಿತ ಪ್ರತಿನಿಧಿಗಳು, ಮತಗಟ್ಟೆ ಅಧಿಕಾರಿಗಳು ಮತ್ತು ಮೇಲ್ವಿಚಾರಕರು, ಮತಗಟ್ಟೆ ಏಜೆಂಟರು, ಮಾಸ್ಟರ್ ಟ್ರೈನರ್ ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಅರ್ಹ ಮತದಾರರ ಹೆಸರು ಸೇರ್ಪಡೆ, ಮೃತರಾದವರ ಅಥವಾ ಸ್ಥಳಾಂತರಗೊಂಡವರ ಹೆಸರುಗಳ ತೆಗೆದುಹಾಕುವಿಕೆ ಹಾಗೂ ತಿದ್ದುಪಡಿಗಳನ್ನು ನಿಖರವಾಗಿ ಕೈಗೊಳ್ಳಬೇಕು. ಯಾವುದೇ ಅರ್ಹ ಮತದಾರ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಕ್ರಮ ವಹಿಸುವುದು ಅಧಿಕಾರಿಗಳ ಪ್ರಮುಖ



ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಬೇಜವಾಬ್ದಾರಿತನ ತೋರದೆ ಪ್ರತಿಯೊಬ್ಬ ಅಧಿಕಾರಿಯೂ ತನ್ನ ಜವಾಬ್ದಾರಿಯನ್ನು ಅರಿತು ಕಾರ್ಯ ನಿರ್ವಹಿಸಬೇಕು. ಕರ್ತವ್ಯ ಲೋಪ ಅಥವಾ ನಿರ್ಲಕ್ಷ್ಯ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಸಿದ ಅವರು, ಪ್ರತಿ ಸೂಪರ್‌ವೈಸರ್ ಅಡಿಯಲ್ಲಿ 8 ರಿಂದ 10 ಬಿಎಲ್‌ಒಗಳು ಕಾರ್ಯ ನಿರ್ವಹಿಸುತ್ತಿದ್ದು, ತಮ್ಮ ವ್ಯಾಪ್ತಿಯ ಎಲ್ಲಾ ಬಿಎಲ್‌ಒಗಳ ಸಂಪೂರ್ಣ ವಿವರಗಳನ್ನು ಹೊಂದಿರಬೇಕು. ಜೊತೆಗೆ ಅವರ ಕಾರ್ಯ ಚಟುವಟಿಕೆಗಳ ಮೇಲೆ ನಿರಂತರ ನಿಗಾವಹಿಸಿ ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದರು.

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಭಾರತೀಯ ಪ್ರಜೆಯಾಗಿದ್ದು, ಕನಿಷ್ಠ 18 ವರ್ಷ ವಯಸ್ಸು ಪೂರ್ಣಗೊಂಡಿರಬೇಕು ಎಂದರಲ್ಲದೆ, ಬಿಎಲ್‌ಒಗಳು ಪ್ರತಿಯೊಂದು ಮನೆ-ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂಗಳನ್ನು ವಿತರಿಸಬೇಕು, ನಮೂನೆಯಲ್ಲಿ ಮತದಾರರ ಇತ್ತೀಚಿನ ಭಾವಚಿತ್ರವನ್ನು ಅಂಟಿಸಿರಬೇಕು. ಜೊತೆಗೆ ಭರ್ತಿ ಮಾಡಿದ ಫಾರಂಗಳ ಮೇಲೆ ಮತದಾರರ ಸಹಿ ಅಥವಾ ಹೆಬ್ಬೆರಳ ಗುರುತು ಕಡ್ಡಾಯವಾಗಿರಬೇಕು ಎಂದು ತಿಳಿಸಿದರು.

ಆಧಾರ್ ಕಾರ್ಡ್ ಸೇರಿದಂತೆ 12 ಅಧಿಕೃತ ದಾಖಲೆಗಳನ್ನು ಗುರುತಿನ ದೃಢೀಕರಣಕ್ಕಾಗಿ ಬಳಸಬಹುದಾದರೂ, ಆಧಾರ್ ಕಾರ್ಡ್ ಪೌರತ್ವದ ಪುರಾವೆಯಲ್ಲ ಎಂಬುದನ್ನು ಅಧಿಕಾರಿಗಳು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಸೂಚನೆ ನೀಡಿದರು.

ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಮೊಬೈಲ್ ಆಪ್ ಮೂಲಕ ಮತದಾರರ ಭರ್ತಿ ಮಾಡಿ ನೀಡಿದ ನಮೂನೆಗಳನ್ನು ಆನ್ ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಕೌಶಲ್ಯವನ್ನು ಅಧಿಕಾರಿಗಳು ಬೆಳೆಸಿಕೊಳ್ಳಬೇಕು ಎಂದರಲ್ಲದೆ, ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತರು, ಕ್ರೀಡಾಪಟುಗಳು, ಸಿನಿಮಾ ಕ್ಷೇತ್ರದ ಗಣ್ಯರು ಹಾಗೂ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಸೇರಿದಂತೆ ಮತಗಟ್ಟೆ ವ್ಯಾಪ್ತಿಯ ಎಲ್ಲಾ ಪ್ರಮುಖ ವ್ಯಕ್ತಿಗಳ ಹೆಸರುಗಳು ಮತದಾರರ ಪಟ್ಟಿಯಲ್ಲಿ ಇರುವುದನ್ನು ಬಿಎಲ್‌ಒಗಳು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ವಿವಿಧ ಅಧಿಕಾರಿಗಳು ಹಾಜರಿದ್ದರು.

## ಪರೀಕ್ಷಾ ಕೇಂದ್ರಗಳ ಸುತ್ತ ನಿಷೇದಾಜ್ಞೆ ಜಾರಿ

• ಪ್ರಜೋದಯ ವರದಿ

ಹಾಸನ: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ವತಿಯಿಂದ ಜೂ.21 ರಂದು ನೀಟ್- 2026 ಪರೀಕ್ಷೆ ನಡೆಯುತ್ತಿದ್ದು, ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ನಗರದ ಸರ್ಕಾರಿ ಇಂಜಿನಿಯರ್ ಕಾಲೇಜು, ಬಿ.ಎಂ. ರಸ್ತೆಯ ಡೈರಿ ಸರ್ಕಲ್, ಸರ್ಕಾರಿ ವಿಜ್ಞಾನ ಕಾಲೇಜು ಸಾಲಗಾಮೆ ರಸ್ತೆ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಗಂಧದ ಕೋಠಿ ಆರ್.ಸಿ. ರಸ್ತೆ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಧಾನ ಆರ್.ಸಿ. ರಸ್ತೆ, ಗಂಧದ ಕೋಠಿ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿಭಜಿತ, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ವಾಣಿವಿಲಾಸ ಪದವಿ ಪೂರ್ವ ಕಾಲೇಜುಗಳಲ್ಲಿ ನೀಟ್ ಪರೀಕ್ಷೆಯನ್ನು ಆಯೋಜಿಸಲಾಗಿದೆ.

ಪರೀಕ್ಷೆ ನಡೆಯುವ ದಿನದಂದು ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿನ ಜೆರಾಕ್ಸ್ ಸೆಂಟರ್‌ಗಳು, ಸೈಬರ್ ಅಥವಾ ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಆದೇಶ ಹೊರಡಿಸಿದ್ದಾರೆ.

# ಪುರಸಭೆಯಾಗಿ ಅರಕಲಗೂಡು ಪ.ಪಂ.

• ಪ್ರಜೋದಯ ವರದಿ

## ಅಗತ್ಯ ಕ್ರಮ: ಸಂಸದ ಶ್ರೇಯಸ್ ಪಟೇಲ್

**ಅರಕಲಗೂಡು:** ಅರಕಲಗೂಡು ಪಟ್ಟಣ ಪಂಚಾಯ್ತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಂಸದ ಶ್ರೇಯಸ್ ಪಟೇಲ್ ಅವರು ಭರವಸೆ ನೀಡಿದರು.

ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ಈ ಕುರಿತು ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು ಮಾನದಂಡ ಹಾಗೂ ಮಾರ್ಗಸೂಚಿಗಳ ಪರಿಶೀಲನೆ ನಡೆಸಲಾಗುತ್ತಿದೆ. ಮುಂಬರುವ ಬಜೆಟ್ ಒಳಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ. ಮಹದೇವಪ್ಪ ಅವರಿಗೆ ಪಟ್ಟಣದ ದಲಿತರು ವಾಸಿಸುವ ವಾರ್ಡ್‌ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವ ಬಗ್ಗೆ ಮನವಿ ಸಲ್ಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸಚಿವರು ಪ್ರತಿ ವಾರ್ಡ್ಗೆ ತಲಾ ರೂ 10 ಲಕ್ಷ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಿದ್ದು ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಅಗತ್ಯ




ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳುವುದಾಗಿಯೂ ಅವರು ಹೇಳಿದರು.

ಪಟ್ಟಣದಲ್ಲಿ ಉತ್ತಮವಾಗಿದ್ದ ರಸ್ತೆಗಳನ್ನು ಯುಜಿಡಿ ಹಾಗೂ ಜೆಜೆಎಂ ಯೋಜನೆಗಳಿಗಾಗಿ ಅಗೆದು ತಿಂಗಳುಗಳೇ ಕಳೆದರೂ ಸಮರ್ಪಕವಾಗಿ ದುರಸ್ತಿ ಮಾಡದಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಎಲ್ಲೆಲ್ಲಿ ರಸ್ತೆಗಳು ಗುಂಡಿ ಬಿದ್ದಿವೆಯೋ ಅಲ್ಲಿ ತಕ್ಷಣವೇ ಸಾರ್ವಜನಿಕರಿಗೆ ತೊಂದರೆಯಾಗದಂತೆ ಆದಷ್ಟು ಬೇಗ ರಸ್ತೆ ದುರಸ್ತಿ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಶ್ರೇಯಸ್ ಪಟೇಲ್ ಅವರು ತಿಳಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಪಿ.ಶ್ರೀಧರ್ ಗೌಡ, ತಹಸೀಲ್ದಾರ್ ಕೆ.ಸಿ.ಸೌಮ್ಯ, ಪಪಂ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್, ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್, ಮುಖಂಡರಾದ ಬಿ.ಸಿ.ರಾಜೇಶ್, ಗಣೇಶ್ ವೇಲಾಪುರಿ, ಚಂದ್ರಪ್ಪ, ಲಿಂಗರಾಜ್, ಮಹೇಶ್, ಚಂದ್ರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ



**ಹಾಸನ:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಾಸನ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ಕೆ.ಆರ್.ಪುರಂ ಮಾರ್ಗದಲ್ಲಿ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜೂ.19 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5-30 ರ ವರೆಗೆ ಕೆ.ಆರ್.ಪುರಂ, ಕುವೆಂಪುನಗರ, ಸಂಪಿಗೆ ರಸ್ತೆ, ಶಂಕರಮಠ ರಸ್ತೆ, ಎಂ.ಜಿ. ರಸ್ತೆ, ಆಡುವಳ್ಳಿ, ಕಾಟೀಹಳ್ಳಿ ಇಂಡಸ್ಟ್ರಿಯಲ್ ಏರಿಯಾ, ಡೈರಿ ಸರ್ಕಲ್, ರೈಲ್ವೆ ಸ್ಟೇಷನ್ ಸುತ್ತಮುತ್ತ, ಬಿ.ಎಂ. ರಸ್ತೆ ಮತ್ತು ಎಂ.ಜಿ. ರಸ್ತೆಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

# ತಡವಾಗಿ ಬಂದ ಅಗ್ನಿಶಾಮಕ ವಾಹನ: ಆಕ್ರೋಶ

• ಪ್ರಜೋದಯ ವರದಿ

## ಅಗ್ನಿ ಅವಘಡದಲ್ಲಿ ಎಲೆಕ್ಟ್ರಿಕ್ ಉಪಕರಣಗಳು ಭಸ್ಮ

**ಹಳೇಬೀಡು:** ಪಟ್ಟಣದ ವ್ಯಾಪಾರಿ ಕಾಂತರಾಜು ಎಂಬುವವರಿಗೆ ಸೇರಿದ ಎಲೆಕ್ಟ್ರಿಕ್ ಮತ್ತು ಹಾರ್ಡ್‌ವೇರ್ ಗೋಡನ್‌ನಲ್ಲಿ ಬುಧವಾರ ರಾತ್ರಿ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಎಲೆಕ್ಟ್ರಿಕ್ ಉಪಕರಣಗಳು ಹಾಗೂ ವಿವಿಧ ಸಾಮಗ್ರಿಗಳು ಸುಟ್ಟು ಭಸ್ಮವಾಗಿವೆ.

ಗೋಡನ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ವಿದ್ಯುತ್ ಸರಬರಾಜಿನಲ್ಲಿ ಉಂಟಾದ ದೋಷ ಅಥವಾ ಹೆಚ್ಚಿನ ವೋಲ್ಟೇಜ್‌ನಿಂದ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಬೆಂಕಿ ಹೊತ್ತಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಈ ಬಗ್ಗೆ ವಿದ್ಯುತ್ ಇಲಾಖೆಯ ನಿರ್ಲಕ್ಷ್ಯದ ಕುರಿತು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಕಿ ಕಾಣಿಸಿಕೊಂಡ ಕೂಡಲೇ ಸ್ಥಳೀಯರು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದರೂ ಅಗ್ನಿಶಾಮಕ ವಾಹನ ಹಾಗೂ ಸಿಬ್ಬಂದಿ ಸ್ಥಳಕ್ಕೆ



ತಡವಾಗಿ ಆಗಮಿಸಿದರು ಎಂಬ ಆರೋಪ ಕೇಳಿ ಬಂದಿದೆ. ವಾಹನ ಸಮಯಕ್ಕೆ ಬಂದಿದ್ದರೆ ಹೆಚ್ಚಿನ ಪ್ರಮಾಣದ ನಷ್ಟವನ್ನು ತಪ್ಪಿಸಬಹುದಿತ್ತು ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೆಂಕಿಯ ಕೆನ್ನಾಲಿಗೆ ಗೋಡನ್‌ನ ಮೇಲ್ಭಾಗಕ್ಕೂ ವ್ಯಾಪಿಸಿದ್ದರಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಸ್ಥಳೀಯರು ಹಾಗೂ ವ್ಯಾಪಾರಿಗಳು ಧೈರ್ಯದಿಂದ ಕಾರ್ಯ ನಿರ್ವಹಿಸಿ ಬೆಂಕಿ ಮತ್ತಷ್ಟು ವ್ಯಾಪಿಸದಂತೆ ತಡೆಗಟ್ಟುವಲ್ಲಿ ಸಹಕರಿಸಿದರು.

ಘಟನಾ ಸ್ಥಳಕ್ಕೆ ಹಳೇಬೀಡು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಗ್ನಿ ಅವಘಡದ ನಿಖರ ಕಾರಣ ಹಾಗೂ ಸಂಭವಿಸಿದ ನಷ್ಟದ ಪ್ರಮಾಣದ ಕುರಿತು ತನಿಖೆ ಆರಂಭಿಸಿದ್ದಾರೆ.

# ಮಾನಸಿಕ ನೆಮ್ಮದಿಗೆ ಧಾರ್ಮಿಕ ಚಿಂತನೆ ಸಹಕಾರಿ: ಶಿವಸಿದ್ದೇಶ್ವರ ಶ್ರೀ

• ಪ್ರಜೋದಯ ವರದಿ

**ಹಾಸನ:** ನಮ್ಮ ದೇಶದ ಸನಾತನ ಸಂಸ್ಕೃತಿ, ಪರಂಪರೆ ಮತ್ತು ಧಾರ್ಮಿಕ ಮೌಲ್ಯಗಳು ಇಂದಿಗೂ ಗ್ರಾಮೀಣ ಪ್ರದೇಶಗಳ ದೇವಾಲಯಗಳ ಮೂಲಕ ಜೀವಂತವಾಗಿದ್ದು, ಇಂತಹ ಧಾರ್ಮಿಕ ಚಿಂತನೆಗಳು ಸಮಾಜದಲ್ಲಿ ಶಾಂತಿ ಹಾಗು ಮನಸ್ಸಿಗೆ ನೆಮ್ಮದಿ ನೀಡುತ್ತವೆಂದು ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಶ್ರೀ ಶಿವಸಿದ್ದೇಶ್ವರ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕಟ್ಟಾಯ ಹೋಬಳಿ ಬ್ಯಾಡರಹಳ್ಳಿ ಗ್ರಾಮದಲ್ಲಿ ಕೇರೆ ಕೋಡಿಯಮ್ಮ ದೇವಸ್ಥಾನದ ಪ್ರಾರಂಭೋತ್ಸವದಲ್ಲಿ ಆಶೀರ್ವಚನ ನೀಡಿದ ಅವರು, ಧರ್ಮ, ಸಂಸ್ಕೃತಿ ಹಾಗು ಸಂಪ್ರದಾಯಗಳ ಉಳಿವು ಮತ್ತು ಬೆಳವಣಿಗೆಗೆ ಸಮಾಜ ಸದಾ ಬದ್ಧವಾಗಿರಬೇಕೆಂದು ಕರೆ ನೀಡಿದರು. ಮಠ-ಮಂದಿರಗಳು ಕೇವಲ ಪೂಜಾ ಸ್ಥಳಗಳಲ್ಲ, ಅವು ಸಮಾಜದಲ್ಲಿ ಶಾಂತಿ, ಸೌಹಾರ್ದತೆ, ನೈತಿಕ ಮೌಲ್ಯ ಹಾಗೂ ಮಾನವೀಯತೆ



ಯನ್ನು ಬಲಪಡಿಸುವ ಕೇಂದ್ರಗಳಾಗಿವೆ. ಇಂತಹ ಆಧ್ಯಾತ್ಮಿಕ ಕಾರ್ಯಕ್ರಮಗಳು ಸಮಾಜವನ್ನು ಒಗ್ಗೂಡಿಸುವ ಶಕ್ತಿ ಹೊಂದಿದ್ದು, ಜನರಲ್ಲಿ ಸತ್ಪ್ರವೃತ್ತಿಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಭಗವಂತನು ಪ್ರಾಣಿ-ಪಕ್ಷಿಗಳಿಗೆ ಸಾಮಾನ್ಯ ಜ್ಞಾನವನ್ನು ನೀಡಿದ್ದರೆ, ಮನುಷ್ಯನಿಗೆ ಮಾತ್ರ ವಿಶಿಷ್ಟವಾದ ಬುದ್ಧಿಶಕ್ತಿ ಮತ್ತು ಉನ್ನತ ಜ್ಞಾನಾರ್ಜನೆ ಮಾಡುವ ಸಾಮರ್ಥ್ಯ ಕರುಣಿಸಿದ್ದಾನೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಬುದ್ಧಿಶಕ್ತಿಯನ್ನು ಸತ್ಕಾರ್ಯಗಳಿಗೆ ಬಳಸಿಕೊಳ್ಳಬೇಕು. ಉನ್ನತ ಚಿಂತನೆಗಳನ್ನು ಬೆಳೆಸಿಕೊಂಡು ಸಮಾಜಮುಖಿ ಜೀವನ ನಡೆಸಬೇಕು ಎಂದು ತಿಳಿಸಿದರು.

ಸತ್ಕಾರ್ಯಗಳು ಎಂದಿಗೂ ಶಾಶ್ವತವಾಗಿದ್ದು, ಮನುಷ್ಯನ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸುತ್ತವೆ. ದುಶ್ಚಟ ಮತ್ತು ದುರಭ್ಯಾಸಗಳಿಂದ ದೂರವಿದ್ದು, ಸದ್ಗುಣಗಳನ್ನು ಅಳವಡಿಸಿಕೊಂಡರೆ ಬದುಕಿನಲ್ಲಿ ಶಾಂತಿ, ನೆಮ್ಮದಿ ಹಾಗು ಆತ್ಮತೃಪ್ತಿ ದೊರೆಯುತ್ತದೆ. ಯಾವುದೇ ವ್ಯಕ್ತಿ ಯಶಸ್ಸು ಸಾಧಿಸಬೇಕಾದರೆ ಜೀವನದಲ್ಲಿ ಸ್ಪಷ್ಟ ಗುರಿ ಇರಬೇಕು. ಗುರಿಯತ್ತ ನಿರಂತರ ಪರಿಶ್ರಮ ಹಾಗು ದೃಢ ಸಂಕಲ್ಪದಿಂದ ಸಾಗಿದರೆ ಸಾಧನೆ ಸಾಧ್ಯವಾಗುತ್ತದೆಂದರು.

ಗ್ರಾಮೀಣ ಭಾಗಗಳಲ್ಲಿ ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರದೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿಯೂ ಕಾರ್ಯ ನಿರ್ವಹಿಸುತ್ತಿವೆ. ಇಂತಹ ದೇವಾಲಯಗಳ ಅಭಿವೃದ್ಧಿಗೆ ಸಾರ್ವಜನಿಕರು ಸಹಕಾರ ನೀಡುವುದು ಸಮಾಜದ ಏಳಿಗೆಗೆ ಸಹಕಾರಿಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ದೊಡ್ಡಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ, ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕುಮಾರಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಶೋಭಾ ಮಂಜುನಾಥ್, ಉಪಾಧ್ಯಕ್ಷ ಮಧು ಸೂಧನ್, ಸದಸ್ಯ ಕಿರಣ್ ಕುಮಾರ್ ಮೊದಲಾದವರಿದ್ದರು.

# ಕಾನೂನು ಪಾಲನೆ ಮಾಡಿ ಉತ್ತಮ ನಾಗರೀಕರಾಗಿ

• ಪ್ರಜೋದಯ ವರದಿ

## ಅನಿಮಿಯಾ ತಪಾಸಣೆ ಕಾರ್ಯಕ್ರಮದಲ್ಲಿ ಎಎಸ್ಪಿ ಶ್ರೀನಿಧಿ

**ಹಾಸನ:** ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಿಂದಲೇ ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನಹರಿಸಿ ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ಕಾನೂನು ಪಾಲನೆ ಮಾಡುವ ಮೂಲಕ ಉತ್ತಮ ನಾಗರೀಕರಾಗಬೇಕು ಎಂದು ಜಿಲ್ಲಾ ಅಪರ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಅವರು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯ, ಕೃಷಿ ಮಹಾವಿದ್ಯಾಲಯ ಕಾರೆಕೆರೆ-ಹಾಸನ, ರ್ರಿತ ಆಲೂರು ಯೋಜನೆ ಸ್ವಯಂ ಸೇವಾ ಸಂಸ್ಥೆ, ಯುವ ರೆಡ್ ಕ್ರಾಸ್ ಘಟಕ ಹಾಗೂ ಎನ್.ಎಸ್.ಎಸ್. ಘಟಕಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಬೃಹತ್ ರಕ್ತದಾನ ಶಿಬಿರ ಮತ್ತು ಅನಿಮಿಯಾ ತಪಾಸಣೆ ಕಾರ್ಯಕ್ರಮ ಉದ್ಘಾಟಿಸಿ



ಮಾತನಾಡಿದರು.

ನಿಯಮಿತವಾಗಿ ರಕ್ತದಾನ ಮಾಡುವುದರಿಂದ ದೇಹದ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದುವರೆಗೂ ನಾನು 50 ಬಾರಿ ರಕ್ತದಾನ ಮಾಡಿರುವುದಾಗಿ ಹಾಗೂ ನೀವುಗಳು ಇದನ್ನು ಅನುಕರಣೆ ಮಾಡಿದರೆ ಆರೋಗ್ಯಕ್ಕೆ ಒಳ್ಳೆಯದು ಎಂದು ತಿಳಿಸಿದರಲ್ಲದೆ, ಬಳಿಕ ಅವರು ಸ್ವತಃ ರಕ್ತದಾನ ಮಾಡುವ ಮೂಲಕ ಚಾಲನೆ ನೀಡಿದರು.

ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕಿ ಡಾ. ಹೇಮಲತಾ ಪಟ್ಟಾಭಿ ಅವರು ಮಾತನಾಡಿ, ರಕ್ತದಾನವು ಶ್ರೇಷ್ಠ ದಾನವಾಗಿದ್ದು, ಒಬ್ಬ ರಕ್ತದಾನಿಯಿಂದ ಮೂರು ಜೀವಗಳನ್ನು ಉಳಿಸಬಹುದು. ರಕ್ತದಾನವು ಹೃದಯ ಸಂಬಂಧಿ ಕಾಯಿಲೆಗಳು, ಸ್ಟ್ರೋಕ್ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಜೊತೆಗೆ ಜ್ಞಾಪಕ ಶಕ್ತಿ ಹಾಗೂ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮೋಹನ್ ರಾಜ್ ಅವರು ಜಿಲ್ಲೆಯಲ್ಲಿ ಇದುವರೆಗೆ 46 ಬಾರಿ ರಕ್ತದಾನ ಮಾಡಿರುವ ಹಿನ್ನೆಲೆಯಲ್ಲಿ ಅವರನ್ನು ಸನ್ಮಾನಿಸಲಾಯಿತು. ಈ ಶಿಬಿರದಲ್ಲಿಯೂ ಸಹ ಮೋಹನ್ ರಾಜ್ ಹಾಗೂ ಅವರ ಶ್ರೀಮತಿ ಪಾಲಾಕ್ಷಮ್ಮ ಅವರು ರಕ್ತದಾನ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾದರು.

ಅಧ್ಯಕ್ಷತೆ ವಹಿಸಿದ್ದ ಡಾ. ಕೆ.ಎನ್. ಮುನಿಸ್ವಾಮಿಗೌಡ ಅವರು ಮಾತನಾಡಿ, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡುವುದರ ಜೊತೆಗೆ ಅನಿಮಿಯಾ ತಪಾಸಣೆಯನ್ನು ಸಹ ಮಾಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಶಿಬಿರದಲ್ಲಿ ಒಟ್ಟು 42 ಜನ ರಕ್ತದಾನಿಗಳು ರಕ್ತದಾನ ಮಾಡಿದರು. ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ರಕ್ತದಾನಿಗಳಿಗೆ ಕೀ ಚೈನ್‌ಗಳನ್ನು ಉಡುಗೊರೆಯಾಗಿ ನೀಡಲಾಯಿತು. 300ಕ್ಕೂ ಹೆಚ್ಚಿನ ವಿದ್ಯರ್ಥಿಗಳು ಅನಿಮಿಯಾ ತಪಾಸಣೆಯ ಸದುಪಯೋಗ ಪಡೆದುಕೊಂಡರು.

ರೆಡ್ ಕ್ರಾಸ್ ಸಭಾಪತಿ ಹೆಚ್.ಪಿ. ಮೋಹನ್, ಶಬ್ಬೀರ್ ಅಹ್ಮದ್, ಅಮ್ಜಾದ್ ಖಾನ್, ಎಚ್.ಡಿ. ಕುಮಾರ್, ಬಿ.ಆರ್.ಉದಯ್ ಕುಮಾರ್, ಬಿ.ಇ. ಶಿವರಾಮೇಗೌಡ, ಡಾ. ಎಸ್.ಟಿ.ಭೈರಪ್ಪನವರ್ ಹಾಗೂ ಡಾ. ಶಿವಬಸಪ್ಪ ಕಂದಕೂರು, ಕಾಲೇಜಿನ ಎನ್.ಎಸ್.ಎಸ್. ಘಟಕದ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಕಣವಿ ಎಂ.ಎಸ್.ಪಿ., ಡಾ. ಪ್ರಕಾಶ್ ಕೋಳೇರ್, ಡಾ.ಮಂಜುನಾಥ್, ಡಾ.ಭರತ್ ಪ್ರಸಾದ್, ಯುವ ರೆಡ್‌ಕ್ರಾಸ್ ಘಟಕದ ಸಂಯೋಜಕರಾದ ಡಾ. ಶಶಿಕಲಾ ಹಾಗೂ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವ್ಯಸನಮುಕ್ತ ಸಂಕಲ್ಪದಿಂದ ದೇಶದ ಬದಲಾವಣೆ

• ಪ್ರಜೋದಯ ವರದಿ

## ಅರೇಹಳ್ಳಿಯಲ್ಲಿ ನಶಾಮುಕ್ತ ಭಾರತ ಅಭಿಯಾನ

**ಅರೇಹಳ್ಳಿ:** ಸಮಾಜ, ಕುಟುಂಬ ಮತ್ತು ಸ್ನೇಹಿತರನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸುವ ಸಂಕಲ್ಪದೊಂದಿಗೆ ದೇಶದ ಬದಲಾವಣೆ ನಮ್ಮಿಂದಲೇ ಆರಂಭವಾಗಬೇಕೆಂದು ಗ್ರಾಮೀಣ ಪುನರ್ವಸತಿ ಕಾರ್ಯಕರ್ತ ಮಧು ಕುಮಾರ್ ಅವರು ಹೇಳಿದರು.

ಕೇಂದ್ರ ಸರ್ಕಾರದ ನಶಾಮುಕ್ತ ಭಾರತ ಅಭಿಯಾನ ಯೋಜನೆಯಡಿ ಹಮ್ಮಿಕೊಂಡಿರುವ ನಶಾಮುಕ್ತ ಭಾರತ ಅಭಿಯಾನ ಸಪ್ತಾಹ ಕಾರ್ಯಕ್ರಮಕ್ಕೆ ಪಟ್ಟಣದ ಅನುಗ್ರಹ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚಾಲನೆ ನೀಡಿ ಅವರು ಮಾತನಾಡಿದ ಅವರು, ಯುವಕರು ರಾಷ್ಟ್ರದ ಶಕ್ತಿಯಾಗಿದ್ದು, ಸಮಾಜ ಹಾಗು ದೇಶದ ಅಭಿವೃದ್ಧಿಯಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ಆದ್ದರಿಂದ ದುಶ್ಚಟಗಳಿಂದ ದೂರ ಇರುವಂತೆ ತಿಳಿಸಿದರು.

ರಾಜ್ಯ ಸರ್ಕಾರದ ವಿಕಲಚೇತನರ ಹಾಗು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶನದ ಮೇರೆಗೆ ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಅಭಿಯಾನವನ್ನು ನಡೆಸಲಾಗುತ್ತಿದೆ. ಇದರ ಅಂಗವಾಗಿ ಶಾಲೆಯಲ್ಲಿ ಮಾದಕ ವಸ್ತುಗಳ



ಸೇವನೆಯ ದುಷ್ಪರಿಣಾಮಗಳ ಕುರಿತು ರಂಗೋಲಿ, ಚಿತ್ರಕಲೆ ಸೇರಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ ವಿದ್ಯಾರ್ಥಿ ಗಳಲ್ಲಿ ಜಾಗೃತಿ ಮೂಡಿಸಲಾಯಿತು. ಮುಂದಿನ ದಿನಗಳಲ್ಲಿ ಹೋಬಳಿ ವ್ಯಾಪ್ತಿಯ ಎಲ್ಲಾ ಶಾಲೆ ಮತ್ತು ಕಾಲೇಜುಗಳಲ್ಲಿ ಇದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಶಾಲೆಯ ಮುಖ್ಯೋಪಾಧ್ಯಾಯೆ ಪ್ರಸಿಲ್ಲಾ ಡಿಸೋಜ ಮಾತನಾಡಿ, ಗ್ರಾಮೀಣ ಭಾಗಗಳಲ್ಲಿ ಬಡತನದ ಜೊತೆಗೆ ಮದ್ಯಪಾನ ವ್ಯಸನವೂ ಹೆಚ್ಚಾಗಿ ಕಂಡು ಬರುತ್ತಿದೆ. ಮದ್ಯಪಾನದಿಂದ ಕುಟುಂಬದ ಶಾಂತಿ ಹಾಳಾಗುವುದರ ಜೊತೆಗೆ ಮಕ್ಕಳ ವಿದ್ಯಾಭ್ಯಾಸ ಮತ್ತು ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತದೆ. ಕೆಲ ಯುವಕರು ಕ್ಷಣಿಕ ಸಂತೋಷ ಮತ್ತು ಕೆಲಸಗಳು ಬೇಗ ಆಗಬೇಕು ಎಂಬ ಭ್ರಮೆಯಿಂದ ಮಾದಕ ವಸ್ತುಗಳತ್ತ ಆಕರ್ಷಿತರಾಗುತ್ತಿದ್ದಾರೆ. ಇದರಿಂದ ಅವರ ಆರೋಗ್ಯ ಮಾತ್ರವಲ್ಲದೆ ಕುಟುಂಬದ ನೆಮ್ಮದಿಯೂ ಹಾಳಾಗುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಹೊಂದಿ, ತಮ್ಮ ನೆರೆಹೊರೆಯವರಲ್ಲೂ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಅವರು ಕರೆ ನೀಡಿದರು.

# ಪೊಲೀಸ್ ಪೇದೆ ಆಕಾಂಕ್ಷಿಗಳಿಗೆ

## ಉಚಿತ ತರಬೇತಿ ಶಿಬಿರ




• ಪ್ರಜೋದಯ ವರದಿ

**ಬೇಲೂರು:** ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ಯುವಕರಿಗಾಗಿ ನಗರದ ಗೆಂಡೇಹಳ್ಳಿ ರಸ್ತೆಯಲ್ಲಿರುವ ಎಕ್ಸಲೆಂಟ್ ಅಕಾಡೆಮಿ ಆಫ್ ಎಜುಕೇಶನ್ ವತಿಯಿಂದ ಜೂನ್ 21ರಂದು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆ ಆಕಾಂಕ್ಷಿಗಳಿಗೆ ಉಚಿತ ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ತರಬೇತುದಾರ ಹರೀಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಪ್ರತಿಭಾವಂತ ಯುವಕರಿಗೆ ಗುಣಮಟ್ಟದ ತರಬೇತಿ ನೀಡುವ ಉದ್ದೇಶದಿಂದ ಶಿಬಿರ ಹಮ್ಮಿಕೊಳ್ಳಲಾಗಿದೆ. ಪೊಲೀಸ್ ನೇಮಕಾತಿ ಪರೀಕ್ಷೆಯ ಪಠ್ಯಕ್ರಮ, ಪ್ರಶ್ನೆಪತ್ರಿಕೆ ವಿಶ್ಲೇಷಣೆ, ಅಧ್ಯಯನ ವಿಧಾನ ಹಾಗೂ ಪರೀಕ್ಷಾ ತಂತ್ರಗಳ ಕುರಿತು ಮಾರ್ಗದರ್ಶನ ನೀಡಲಾಗುವುದು ಎಂದು ತಿಳಿಸಿದರು.

ಮೊದಲ ದಿನದ ತರಬೇತಿ ಉಚಿತವಾಗಿದ್ದು, ನಂತರ ಆಸಕ್ತ ಅಭ್ಯರ್ಥಿಗಳಿಗೆ 45 ದಿನಗಳ ವಿಶೇಷ ತರಬೇತಿ ನೀಡಲಾಗುವುದು ಎಂದು ತಿಳಿಸಿದ ಅವರು, ದೂರದ ನಗರಗಳಿಗೆ ತೆರಳದೆ ಸ್ಥಳೀಯವಾಗಿಯೇ ಉತ್ತಮ ತರಬೇತಿ ಪಡೆಯಲು ಯುವಕರು ಈ ಅವಕಾಶವನ್ನು ಬಳಸಿಕೊಳ್ಳಬೇಕು. ಯಾವುದೇ ರೀತಿಯ ಶುಲ್ಕವನ್ನು ನಮ್ಮ ಸಂಸ್ಥೆಯ ವತಿಯಿಂದ ಪಡೆಯುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ತರಬೇತುದಾರರಾದ ನಾಗೇಂದ್ರ ಹಾಗೂ ಬಸವರಾಜು ಉಪಸ್ಥಿತರಿದ್ದರು.

## ಶಾಂತಿಗ್ರಾಮದಲ್ಲಿ ದೇವಾಂಗ ಸಮುದಾಯ ಭವನ ಲೋಕಾರ್ಪಣೆ

# ನುಡಿದಂತೆ ನಡೆಯುವ ಗುಣವೇ ರಾಜಕಾರಣಿಗೆ ಶ್ರೀರಕ್ಷೆ

• ಪ್ರಜೋದಯ ವರದಿ

**ಹಾಸನ:** ಮಾತುಗಳ ಅಬ್ಬರಕ್ಕಿಂತ, ಮೌನವಾಗಿ ಮಾಡುವ ಸಾಧನೆಯೇ ಸದಾ ಜೀವಂತ. ನುಡಿದಂತೆ ನಡೆಯುವ ಗುಣವೇ ರಾಜಕಾರಣಿಗೆ ಶ್ರೀರಕ್ಷೆ ಎಂದು ರಾಜ್ಯಸಭಾ ಸದಸ್ಯ ಕೆ.ನಾರಾಯಣ ಅವರು ತಿಳಿಸಿದರು.

ತಾಲ್ಲೂಕಿನ ಶಾಂತಿಗ್ರಾಮದಲ್ಲಿ ಅತ್ಯಾಧುನಿಕವಾಗಿ ನಿರ್ಮಾಣಗೊಂಡಿರುವ ದೇವಾಂಗ ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಿ, ರಾಜ್ಯಸಭಾ ಸದಸ್ಯತ್ವದ ಅವಧಿಯ ಮುಕ್ತಾಯದ ಸಂದರ್ಭದಲ್ಲಿ ದೇವಾಂಗ ಸಮುದಾಯದವರು ನೀಡಿದ ಆತ್ಮೀಯ ನಾಗರಿಕ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಇಂದು ಎಲ್ಲೆಡೆ ಪ್ರಚಾರಪ್ರಿಯ ರಾಜಕಾರಣಿಗಳು ಹೆಚ್ಚಾಗುತ್ತಿದ್ದಾರೆ, ತಾವು ಎಂದಿಗೂ ಪ್ರಚಾರ ಬಯಸದೆ ಕೊರೋನಾ ಸಂದರ್ಭದಲ್ಲಿ ಉದ್ಯೋಗ ಕಳೆದುಕೊಂಡು ಸಂಕಷ್ಟದಲ್ಲಿದ್ದ ಕುಟುಂಬಗಳ ಜೀವನ ಕಟ್ಟಿಕೊಳ್ಳಲು ಉಚಿತವಾಗಿ ಟೈಲರಿಂಗ್ ಮಿಷನ್ ಹಾಗೂ ಅಗತ್ಯ ನೆರವು ನೀಡಿ ಆಸರೆಯಾಗಿದ್ದನ್ನು ಸ್ಮರಿಸಿದರು. ಎಲೆಯ ಮರೆಯ ಕಾಯಿಯಂತೆ ಕರ್ತವ್ಯ ನಿರ್ವಹಿಸುತ್ತಿದ್ದ ತನ್ನನ್ನು ಗುರುತಿಸಿ ಪ್ರಧಾನಿ ನರೇಂದ್ರ



ಮೋದಿಯವರು ರಾಜ್ಯಸಭಾ ಸದಸ್ಯತ್ವದ ಜವಾಬ್ದಾರಿಯನ್ನು ನೀಡಿದ್ದರು. ಆ ಅಧಿಕಾರಾವಧಿಯನ್ನು ಅತ್ಯಂತ ಯಶಸ್ವಿಯಾಗಿ ಮತ್ತು ತೃಪ್ತಿಕರವಾಗಿ ನಿರ್ವಹಿಸಿದ್ದೇನೆ. ತಮ್ಮ ಅವಧಿಯಲ್ಲಿ ಲಭ್ಯವಿದ್ದ ಸಂಸದರ ನಿಧಿಯ ಅನುದಾನವನ್ನು ರಾಜ್ಯದ ಎಲ್ಲ ಜಿಲ್ಲೆಗಳಿಗೂ ಸಮರ್ಪಕವಾಗಿ ವಿನಿಯೋಗಿಸಿದ್ದು, ಅದರಲ್ಲೂ ವಿಶೇಷವಾಗಿ ಹಾಸನ ಜಿಲ್ಲೆಗೆ ಅತಿ ಹೆಚ್ಚು ಅನುದಾನ ನೀಡಿರುವುದಾಗಿ ತಿಳಿಸಿದರಲ್ಲದೆ, ಸಾರ್ವಜನಿಕರು ಈ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ವಿನಂತಿಸಿದರು.

ಮಾಜಿ ಶಾಸಕ ಎಂ.ಡಿ. ಲಕ್ಷ್ಮಿನಾರಾಯಣ್ ಅವರು ಮಾತನಾಡಿ, ಕೆ. ನಾರಾಯಣ ಅವರು ಕೇವಲ ರಾಜಕೀಯಕ್ಕೆ ಸೀಮಿತವಾಗದೆ ಕೇರಳ ಮತ್ತು ಕರ್ನಾಟಕದ ಗಡಿಯಲ್ಲಿರುವ ಕೊಂಡೆವೂರು ಮಠವನ್ನು ಕಟ್ಟಿ ಬೆಳೆಸಲು ಅಪಾರ ಶ್ರಮ ವಹಿಸಿದ್ದಾರೆ. ಅದರಲ್ಲೂ ಕೊರೋನಾ ಸಂದರ್ಭದಲ್ಲಿ ಯಾವುದೇ ಪ್ರಚಾರವಿಲ್ಲದೆ ಸಾವಿರಾರು ಜನರಿಗೆ ಆಹಾರದ ಕಿಟ್‌ಗಳನ್ನು ವಿತರಿಸಿದ ಹೆಗ್ಗಳಿಕೆ ಅವರದ್ದು ಎಂದು ಶ್ಲಾಘಿಸಿದರು. ಇದೇ ವೇಳೆ ಶಾಂತಿಗ್ರಾಮದ ಜಿ.ಆರ್. ಮಂಜೇಶ್ ಅವರು ಊರಿನ ಸಾಂಸ್ಕೃತಿಕ ಪ್ರತಿಭೆಯಾಗುವುದರ ಜೊತೆಗೆ, ಈ ಸಮುದಾಯ ಭವನವನ್ನು ತರಲು ಹಗಲಿರುಳು ಶ್ರಮಿಸಿದ್ದಾರೆ ಎಂದು ಅವರ ಸೇವೆಯನ್ನು ಶ್ಲಾಘಿಸಿದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಕೆ.ನಾರಾಯಣ ಅವರ ಕರ್ತವ್ಯಪರತೆ ಮತ್ತು ನುಡಿದಂತೆ ನಡೆಯುವ ಅಪರೂಪದ ಗುಣಗಳು ನಮ್ಮಂತಹ ಯುವ ಜನಪ್ರತಿನಿಧಿಗಳಿಗೆ ದಾರಿದೀಪ ಹಾಗೂ ಮಾರ್ಗದರ್ಶಿಯಾಗಿದೆ. ಮುಂದಿನ ದಿನಗಳಲ್ಲಿ ಅವರದೇ ಆದರ್ಶದ ಹಾದಿಯಲ್ಲಿ ತಾವು ಮುನ್ನಡೆಯುವುದಾಗಿ ತಿಳಿಸಿದರಲ್ಲದೆ, ನೂತನ ಸಮುದಾಯ ಭವನದ ಅಡುಗೆ ಮನೆ ಹಾಗೂ ಊಟದ ಸಭಾಂಗಣದ ಕಾಮಗಾರಿಗಾಗಿ ತಮ್ಮ ಸಂಸದರ ನಿಧಿಯಿಂದ ಎರಡು ಕಂತುಗಳಲ್ಲಿ ವಿಶೇಷ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಶಾಂತಿಗ್ರಾಮ ದೇವಾಂಗ ಸಂಘದ ಅಧ್ಯಕ್ಷ ಸುಬ್ರಮಣ್ಯ ಅವರು ಮಾತನಾಡಿ, ಸುಮಾರು 20 ವರ್ಷಗಳ ಹಿಂದೆ ಕೇವಲ ಒಂದು ಸಣ್ಣ ದೇವಾಂಗ ರಾಮಮಂದಿರವಾಗಿ ಆರಂಭವಾದ ಈ ಸಂಸ್ಥೆಗೆ ಕೆ. ನಾರಾಯಣ ಅವರು ಬರೋಬ್ಬರಿ 50 ಲಕ್ಷ ರೂ.ಗಳ ವಿಶೇಷ ಅನುದಾನ ನೀಡಿ ಇಷ್ಟೊಂದು ಸುಸಜ್ಜಿತ ಮತ್ತು ಭವ್ಯ ಭವನ ನಿರ್ಮಾಣವಾಗಲು ಕಾರಣರಾಗಿದ್ದಾರೆ ಎಂದು ಅವರು ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಹಂಪಿ ಹೇಮಕೂಟ ಗಾಯತ್ರಿ ಪೀಠದ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ದಯಾನಂದಪುರಿ ಮಹಾಸ್ವಾಮೀಜಿ ಹಾಗೂ ಕೊಂಡೆವೂರು ಮಠದ ಶ್ರೀ ನಿತ್ಯಾನಂದ ಯೋಗಾಶ್ರಮದ ಪರಮಪೂಜ್ಯ ಜಗದ್ಗುರು ಶ್ರೀ ಯೋಗಾನಂದ ಸರಸ್ವತೀ ಮಹಾಸ್ವಾಮೀಜಿ ಅವರು ವಹಿಸಿ ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ಬೆಂಗಳೂರು ದೇವಾಂಗ ಸಂಘದ ಅಧ್ಯಕ್ಷ ಡಾ. ಜಿ. ರಮೇಶ್, ಚಿತ್ರನಟ ಹಾಗೂ ರ್‍ಯಾಪರ್ ಚಂದನ್‌ಶೆಟ್ಟಿ, ಜಿಪಂ ಮಾಜಿ ಸದಸ್ಯ ಹನುಮೇಗೌಡ, ದೇವಾಂಗ ಸೇವಾ ಸಮಾಜದ ಅಧ್ಯಕ್ಷ ಉಮಾಶಂಕರ್, ರಾಜ್ಯ ದೇವಾಂಗ ಸಂಘದ ಅಧ್ಯಕ್ಷ ಪಿ.ರವೀಂದ್ರ, ಕಲ್ಬುರ್ಗಿ, ರಾಜ್ಯ ದೇವಾಂಗ ನೌಕರ ಸಂಘದ ಮಾಜಿ ಅಧ್ಯಕ್ಷ ಭಾಸ್ಕರಯ್ಯ, ಜಿಲ್ಲಾ ದೇವಾಂಗ ಸಂಘದ ಅಧ್ಯಕ್ಷ ವಿ.ನಂಜುಂಡಸ್ವಾಮಿ, ಶಾಂತ ಸುಬ್ರಹ್ಮಣ್ಯ, ರಾಜ್ಯ ದೇವಾಂಗ ಸಂಘದ ಉಪಾಧ್ಯಕ್ಷ ಎಸ್.ಸಿ.ಸತೀಶ್, ಗೊರೂರು ಶಿವೇಶ್ ಉಪಸ್ಥಿತರಿದ್ದರು.

ಭವನದ ನಿರ್ಮಾಣಕ್ಕೆ ಉದಾರವಾಗಿ ಧನಸಹಾಯ ಮಾಡಿದ ದಾನಿಗಳನ್ನು ಹಾಗೂ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದವರನ್ನು ಇದೇ ಸಂದರ್ಭದಲ್ಲಿ ಸಂಘದ ವತಿಯಿಂದ ಗೌರವಿಸಿ, ಸನ್ಮಾನಿಸಲಾಯಿತು.

### ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ತರಾಟೆ | ಜೂ. 21ಕ್ಕೆ ಮರು ಪರೀಕ್ಷೆ

# ನೀಟ್ ಮರು ಪರೀಕ್ಷೆ: ಟೆಲಿಗ್ರಾಮ್ ನಿಷೇಧಕ್ಕೆ ಆಕ್ಷೇಪ

• ಪ್ರಜೋದಯ ವರದಿ

**ನವದೆಹಲಿ:** ನೀಟ್-ಯುಜಿ ಮರು ಪರೀಕ್ಷೆ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ಮೆಸೇಜಿಂಗ್ ಅಪ್ಲಿಕೇಶನ್ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿಷೇಧ ಹೇರಿರುವುದನ್ನು ದೆಹಲಿ ಹೈಕೋರ್ಟ್ ಪ್ರಶ್ನಿಸಿದೆ.

ನಾಗರಿಕರ ಒಂದು ವರ್ಗ ಪರೀಕ್ಷೆ ಬರೆಯುತ್ತಿರುವ ಕಾರಣಕ್ಕೆ 150 ಮಿಲಿಯನ್ ಬಳಕೆದಾರರ ಹಕ್ಕುಗಳನ್ನು ಹೇಗೆ ಮೊಟಕುಗೊಳಿಸುತ್ತೀರಾ ಎಂದು ಪ್ರಶ್ನಿಸಿದೆ. ಈ ಸಂಬಂಧ ಟೆಲಿಗ್ರಾಮ್ ಆ್ಯಪ್ ಸಲ್ಲಿಸಿದ್ದ ಅರ್ಜಿ ಕುರಿತು ಎರಡೂ ಕಡೆಯ ವಾದಗಳನ್ನು ಆಲಿಸಿದ ನಂತರ ನ್ಯಾಯಮೂರ್ತಿ ತೇಜಸ್ ಕರಿಯಾ ಅವರ ರಜಾ ಪೀಠವು ತನ್ನ ತೀರ್ಪನ್ನು ಕಾಯ್ದಿರಿಸಿದೆ.

ಸಂಜೆ 7 ಗಂಟೆಯೊಳಗೆ ಲಿಖಿತ ವಿವರಣೆ ಸಲ್ಲಿಸಲು ನ್ಯಾಯಾಧೀಶರು ಇಬ್ಬರಿಗೂ ಸೂಚಿಸಿದರು. ವಿಚಾರಣೆ ವೇಳೆ ಕೇಂದ್ರ ಸರ್ಕಾರ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿತು. ಹೆಚ್ಚಿನ ಪ್ರಮಾಣದಲ್ಲಿ ಮಾಹಿತಿಯನ್ನು ಪ್ರಸಾರ ಮಾಡಲು ಮೆಸೇಜಿಂಗ್ ಆ್ಯಪ್ ನೆರವಾಗುತ್ತದೆ ಎಂದು ವಾದಿಸಿತು.

ಕೇಂದ್ರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಒಂದೇ ಟೆಲಿಗ್ರಾಮ್ ಖಾತೆಯಲ್ಲಿ 40 ಬಾಟ್‌ಗಳನ್ನು ರಚಿಸಬಹುದೆಂದರು.



ಬಾಟ್‌ಗಳು ಯಂತ್ರಗಳಾಗಿವೆ. ಅವು ಮತ್ತಷ್ಟು ಗುಣಿಸಬಹುದು. ವರದಿಯ ಪ್ರಕಾರ, ಮಾಹಿತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಸಾರ ಮಾಡಬಹುದಾದ ಬಾಟ್ ಮೂಲ ಸೌಕರ್ಯವನ್ನು ಟೆಲಿಗ್ರಾಮ್ ನೀಡಬಹುದು. ಇದು ವಿಶಿಷ್ಟವಾಗಿದೆ ಏಕೆಂದರೆ ಇದು ಕನಿಷ್ಟ ಮಾನವ ಮೇಲ್ವಿಚಾರಣೆಯೊಂದಿಗೆ ಅತ್ಯಾಧುನಿಕ ನೆಟ್‌ವರ್ಕ್‌ಗಳನ್ನು ರಚಿಸಲು ಅನುಮತಿಸುತ್ತದೆಂದು ತಿಳಿಸಿದರು.

ಕೇಂದ್ರ ಸರ್ಕಾರದ ನಿರ್ಧಾರ ಸಮರ್ಥಿಸಿಕೊಂಡ ತುಷಾರ್ ಮೆಹ್ತಾ, ಸರ್ಕಾರ ಇತರ ಮಧ್ಯವರ್ತಿಗಳೊಂದಿಗೆ ಈ ಸಮಸ್ಯೆಯನ್ನು ಹೊಂದಿಲ್ಲ, ಇದು ಕ್ಲೌಡ್ ಮೂಲಕ ಕಾರ್ಯನಿರ್ವಹಿಸುತ್ತದೆ. ಅವರು ಅದನ್ನು ನಿರ್ಬಂಧಿಸಿದರೂ ಮತ್ತು ಯಾರಾದರೂ ದುಷ್ಕೃತ್ಯ ಎಸಗಿದರೂ, ಕಾನೂನು ಜಾರಿ ಸಂಸ್ಥೆಗಳು ನಿಜವಾದ ಬಳಕೆದಾರರನ್ನು ತಲುಪಲು ಸಾಧ್ಯವಾಗುವುದಿಲ್ಲ, ಟೆಲಿಗ್ರಾಮ್ ಅನ್ನು ಭಯೋತ್ಪಾದಕ ಚಟುವಟಿಕೆಗಳಿಗೆ ಆಗಾಗ್ಗೆ ಬಳಸಲಾಗುತ್ತದೆಂದು ಹೇಳಿದರು.

ಟೆಲಿಗ್ರಾಮ್ ಆ್ಯಪ್ ಪರ ಹಿರಿಯ ವಕೀಲ ಧ್ರುವ ಮೆಹ್ತಾ ವಾದಿಸಿದರು. ಮೆಸೇಜಿಂಗ್ ಆ್ಯಪ್ ಅನ್ನು ತಾತ್ಕಾಲಿಕವಾಗಿ ನಿರ್ಬಂಧಿಸುವ ಆದೇಶದ ವಿರುದ್ಧ ಪ್ರತಿಕ್ರಿಯೆ ಸಲ್ಲಿಸುವಂತೆ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿತು. ಜೂ. 21 ರಂದು ನಡೆಯಲಿರುವ ನೀಟ್ ಯುಜಿ ಮರು ಪರೀಕ್ಷೆಗೆ ಮುನ್ನೆಚ್ಚರಿಕೆಯಾಗಿ ಜೂ. 22ರ ವರೆಗೆ ಸರ್ಕಾರ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿರ್ಬಂಧ ವಿಧಿಸಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದ ನಡುವೆ ಮೇ 3 ರಂದು ವೈದ್ಯಕೀಯ ಪ್ರವೇಶಕ್ಕಾಗಿ ನಡೆದ ರಾಷ್ಟ್ರೀಯ ಅರ್ಹತಾ-ಕಮ್-ಪ್ರವೇಶ ಪರೀಕ್ಷೆ (ಪದವಿ ಪೂರ್ವ) ಅಥವಾ ನೀಟ್-ಯುಜಿಯನ್ನು ರದ್ದುಗೊಳಿಸಿದ ನಂತರ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮರುಪರೀಕ್ಷೆಯನ್ನು ಘೋಷಿಸಿತು. ಈ ವಿಷಯವು ಪ್ರಸ್ತುತ ಸಿಬಿಐ ತನಿಖೆಯಲ್ಲಿದೆ.

**ವದಂತಿಗಳಿಗೆ ಕಿವಿಗೊಡಬೇಡಿ**

ತಾಳ್ಮೆಯಿಂದಿರಿ, ವದಂತಿಗಳಿಗೆ ಕಿವಿಕೊಡಬಾರದು ಎಂದು ನೀಟ್‌ಯುಜಿ ಮರು ಪರೀಕ್ಷೆಗೆ ಸಿದ್ಧರಾಗುತ್ತಿರುವ ಆಕಾಂಕ್ಷಿಗಳಿಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಸಲಹೆಯನ್ನು ನೀಡಿದೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ಕುರಿತು ವಿದ್ಯಾರ್ಥಿಗಳಿಗೆ ಸಂದೇಶವನ್ನು ಹಂಚಿಕೊಂಡಿದೆ. ನೀಟ್ ಯುಜಿ 2026 ಪರೀಕ್ಷೆಗೆ ಕೇವಲ ಮೂರು ದಿಗಳಷ್ಟೇ ಬಾಕಿ ಇದೆ. ಪ್ರತಿಯೊಬ್ಬ ಆಕಾಂಕ್ಷಿಯೂ ಕಷ್ಟಪಟ್ಟು ಸಿದ್ದತೆ ನಡೆಸಿದ್ದೀರಿ. ಈಗ ನಿಮ್ಮ ಪ್ರಯತ್ನದ ಮೇಲೆ ನಂಬಿಕೆಯನ್ನಿಡುವ ಸಮಯವಾಗಿದೆ. ತಾಳ್ಮೆಯಿಂದಿರಿ, ಚೆನ್ನಾಗಿ ವಿಶ್ರಾಂತಿ ಪಡೆಯಿರಿ. ನಿಮ್ಮಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಎಂದು ಸಲಹೆ ನೀಡಿದೆ.

ಪರೀಕ್ಷೆಯನ್ನು ನಿಗದಿಪಡಿಸಿದಂತೆ ನಡೆಸಲಾಗುವುದು. ದಯವಿಟ್ಟು ಪರೀಕ್ಷೆ ಮುಂದೂಡಿಕೆಯ ವದಂತಿ ಅಥವಾ ಸಾಮಾಜಿಕ ಮಾಧ್ಯಮದಲ್ಲಿನ ಬರುವ ಅಪಪ್ರಚಾರಗಳಿಂದ ವಿಚಲಿತರಾಗಬೇಡಿ. ಎನ್‌ಟಿಎಯಿಂದ ಮಾತ್ರ ಅಧಿಕೃತ ಮಾಹಿತಿಯನ್ನು ಪಡೆದುಕೊಳ್ಳಿ ಎಂದು ಸೂಚಿಸಿದೆ. ಸುರಕ್ಷಿತ ಹಾಗು ನ್ಯಾಯಯುತವಾಗಿ ಪರೀಕ್ಷೆ ನಡೆಸಲು ಸಂಬಂಧಿತ ಸಚಿವಾಲಯಗಳು, ಸರ್ಕಾರ ಹಾಗು ಭದ್ರತಾ ಸಂಸ್ಥೆಗಳು ನಿಕಟ ಸಮನ್ವಯ ಸಾಧಿಸಿವೆ ಎಂದು ನಾವು ಭರವಸೆ ನೀಡಲು ಬಯಸುತ್ತೇವೆ. ಪ್ರಾಮಾಣಿಕ ವಿದ್ಯಾರ್ಥಿಗಳ ಹಿತರಕ್ಷಣೆಗೆ ನಮ್ಮ ಆದ್ಯತೆಯಾಗಿದೆ ಎಂದು ತಿಳಿಸಿದೆ. ಮಾನಸಿಕವಾಗಿ ಸಮಸ್ಯೆ ಎದುರಾದರೆ 14416 ಸಂಖ್ಯೆಗೆ ಕರೆ ಮಾಡಲು ಸೂಚಿಸಲಾಗಿದೆ. ವಿದ್ಯಾರ್ಥಿಗಳು ತಾಳ್ಮೆ ಕಾಪಾಡಲು ಪೋಷಕರು ಹಾಗು ಶಿಕ್ಷಕರೂ ನೆರವಾಗುವಂತೆ ಮನವಿ ಮಾಡಲಾಗಿದೆ.

## ಜೂ.21 ರಂದು ಕೋಮು ಸೌಹಾರ್ದತೆ ಸವಾಲು ವಿಚಾರಗೋಷ್ಠಿ

• ಪ್ರಜೋದಯ ವರದಿ

**ಹಾಸನ:** ಕೋಮು ಸೌಹಾರ್ದತೆಗೆ ಸವಾಲುಗಳು ವಿಷಯ ಕುರಿತು ಜೂ.21 ರಂದು ಬೆಳಿಗ್ಗೆ 10 ಗಂಟೆಗೆ ವಿಚಾರಗೋಷ್ಠಿ, ವಚನ ಹಾಗು ಕವಿಗೋಷ್ಠಿಯನ್ನು ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಕರ್ತ ವೆಂಕಟೇಶ್ ಅವರು ತಿಳಿಸಿದರು.




ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ತಾಲ್ಲೂಕು ಮಹಿಳಾ ಕದಳಿ ವೇದಿಕೆ, ಶರಣ ಸಾಹಿತ್ಯ ಪರಿಷತ್, ಭೀಮ ವಿಜಯ ಹಾಗು ಉದಯ ವರದಿ ಪತ್ರಿಕೆಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತಣ್ಣೀರುಹಳ್ಳ ಮಠದ ಶ್ರೀ ವಿಜಯ ಕುಮಾರ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸುವರು. ಅರಕಲಗೂಡಿನ ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ವಚನ ಸಾಹಿತ್ಯದಲ್ಲಿ ಕೋಮು ಸೌಹಾರ್ದತೆ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದರು.

ಮಾಜಿ ಶಾಸಕ ವೈ.ಎಸ್.ವಿ.ದತ್ತ ಕಾರ್ಯಕ್ರಮ ಉದ್ಘಾಟಿಸುವರು. ಲೇಖಕ ಸುಬ್ಬು ಹೊಲೆಯಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್.ಮಲ್ಲೇಶಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ. ಆರ್.ಕೆಂಚೇಗೌಡ, ತಾಲ್ಲೂಕು ಮಹಿಳಾ ಕದಳಿ ವೇದಿಕೆ ಅಧ್ಯಕ್ಷೆ ಗಿರಿಜಾ ನಿರ್ವಾಣಿ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾ.ನಂ. ಲೋಕೇಶ್ ಹಾಗೂ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕುಮಾರ ಸ್ವಾಮಿ ಮುಖ್ಯ ಅತಿಥಿಗಳಾಗಿ ಭಾಗ ವಹಿಸಲಿದ್ದಾರೆ. ವಚನ ವಾಚನ ಹಾಗು ಕವಿಗೋಷ್ಠಿಗೆ 60 ಉದಯೋನ್ಮುಖ ಕವಿಗಳು ಭಾಗವಹಿಸಿ ಕವನ ವಾಚನ ಮಾಡಲಿದ್ದಾರೆ. ವಿಶ್ವಾಸ್ ಡಿ.ಗೌಡ ಅವರ ವರ್ಷವಿಡೀ ಶ್ರಾವಣ ಕೃತಿ ಲೋಕಾರ್ಪಣೆ ಆಗಲಿದೆ ಎಂದು ತಿಳಿಸಿದರು.

## ಮಾನಸಿಕ ನೆಮ್ಮದಿಗೆ ಧಾರ್ಮಿಕ ಚಿಂತನೆ ಸಹಕಾರಿ: ಶಿವಸಿದ್ದೇಶ್ವರ ಶ್ರೀ

» ಮೊದಲನೇ ಪುಟದಿಂದ

ಸತ್ಕಾರ್ಯಗಳು ಎಂದಿಗೂ ಶಾಶ್ವತ ವಾಗಿದ್ದು, ಮನುಷ್ಯನ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸುತ್ತವೆ. ದುಶ್ಚಟ ಮತ್ತು ದುರಭ್ಯಾಸಗಳಿಂದ ದೂರವಿದ್ದು, ಸದ್ಗುಣಗಳನ್ನು ಅಳವಡಿಸಿಕೊಂಡರೆ ಬದುಕಿನಲ್ಲಿ ಶಾಂತಿ, ನೆಮ್ಮದಿ ಹಾಗು ಆತ್ಮತೃಪ್ತಿ ದೊರೆಯುತ್ತದೆ. ಯಾವುದೇ ವ್ಯಕ್ತಿ ಯಶಸ್ಸು ಸಾಧಿಸಬೇಕಾದರೆ ಜೀವನ ದಲ್ಲಿ ಸ್ಪಷ್ಟ ಗುರಿ ಇರಬೇಕು. ಗುರಿ ಯತ್ತ ನಿರಂತರ ಪರಿಶ್ರಮ ಹಾಗು ದೃಢ ಸಂಕಲ್ಪದಿಂದ ಸಾಗಿದರೆ ಸಾಧನೆ ಸಾಧ್ಯವಾಗುತ್ತದೆಂದರು.

ಗ್ರಾಮೀಣ ಭಾಗಗಳಲ್ಲಿ ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರದೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿಯೂ ಕಾರ್ಯನಿರ್ವಹಿಸುತ್ತಿವೆ. ಇಂತಹ ದೇವಾಲಯಗಳ ಅಭಿವೃದ್ಧಿಗೆ ಸಾರ್ವಜನಿಕರು ಸಹಕಾರ ನೀಡುವುದು ಸಮಾಜದ ಏಳಿಗೆಗೆ ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ದೊಡ್ಡಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ, ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ, ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ, ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಎನ್. ಕುಮಾರಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಶೋಭಾ ಮಂಜುನಾಥ್, ಉಪಾಧ್ಯಕ್ಷ ಮಧುಸೂಧನ್, ಸದಸ್ಯ ಕಿರಣ್ ಕುಮಾರ್ ಮೊದಲಾದವರಿದ್ದರು.

## IFWJ ರಾಷ್ಟ್ರೀಯ ಮಂಡಳಿಗೆ ಜಿಲ್ಲೆಯ ಪತ್ರಕರ್ತರ ನೇಮಕ



• ಪ್ರಜೋದಯ ವರದಿ

**ಹಾಸನ:** ದೆಹಲಿಯ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರನ್ನಾಗಿ ಜಿಲ್ಲೆಯ ಪತ್ರಕರ್ತರಾದ ರವಿ ನಾಕಲಗೂಡು, ಹೆತ್ತೂರು ನಾಗರಾಜ್ ಮತ್ತು ಟಿ.ಎ. ಶ್ರೀನಿಧಿ ಅವರನ್ನು ನೇಮಕ ಮಾಡಲಾಗಿದೆ.

ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಅವರ ಮಾರ್ಗದರ್ಶನದಲ್ಲಿ ಸಂಘಟನೆಯ ಚಟುವಟಿಕೆಯಲ್ಲಿ ಭಾಗವಹಿಸಿ ರಾಜ್ಯದ ಪತ್ರಕರ್ತರ ಸಮಸ್ಯೆಗಳ ಕುರಿತು ರಾಷ್ಟ್ರ ಮಟ್ಟದಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವಲ್ಲಿ ಕಾರ್ಯ ನಿರ್ವಹಿಸಿ ಎಂದು ಒಕ್ಕೂಟದ ಮಹಾ ಪ್ರಧಾನ ಕಾರ್ಯದರ್ಶಿ ಪರಮಾನಂದ ಪಾಂಡೆ ಅವರು ತಿಳಿಸಿದ್ದಾರೆ.

ಜಿಲ್ಲೆಯ ಮೂವರು ಪತ್ರಕರ್ತರ ಆಯ್ಕೆಗೆ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಹಾಗು ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್. ಪ್ರಮೋದ್, ಸಂಘದ ಎಲ್ಲಾ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

## ಎಸ್‌ಐಆರ್ ಪ್ರಜಾಪ್ರಭುತ್ವ ನಾಶಗೊಳಿಸುವ ಪ್ರಕ್ರಿಯೆ

ವರದಿರುವ ಈ ಕಾಲದಲ್ಲಿ ಇಂತಹ ಸಣ್ಣ ತಪ್ಪುಗಳನ್ನು ಸರಿಪಡಿಸುವ ಬದಲು ಇಡೀ ಮತದಾರರನ್ನೇ ಸಂಶಯದಿದ ನೋಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಎಸ್‌ಐಆರ್ ಹೆಸರಿನಲ್ಲಿ ಬಿಹಾರದಲ್ಲಿ 65 ಲಕ್ಷ ಜನರ ಮತದಾನದ ಹಕ್ಕು ಕಸಿದುಕೊಳ್ಳಲಾಯಿತು. ಪಶ್ಚಿಮ ಬಂಗಾಳದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಹೊರತಳ್ಳುವ ಪ್ರಕ್ರಿಯೆ ಆರಂಭವಾಯಿತಾದರೂ ಅಂತಿಮವಾಗಿ ಲಕ್ಷಾಂತರ ಬಡ ಹಿಂದೂಗಳೂ ಕೂಡ ಮತದಾನದ ಹಕ್ಕನ್ನು ಕಳೆದುಕೊಂಡಿದ್ದಾರೆ. ದೇಶದ ಹೆಮ್ಮೆಯ ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್ ಅವರ ಹೆಸರೇ ಡೌಟ್‌ಫುಲ್ ಸಿಟಿಜನ್‌ಟಿ ಪಟ್ಟಿಗೆ ಸೇರುವಂತಾಗಿದ್ದು, ಈ ವ್ಯವಸ್ಥೆಯ ಅಣಕವಾಗಿದೆ.

ಕರ್ನಾಟಕದಲ್ಲಿ ಈಗಾಗಲೇ ಮ್ಯಾಪಿಂಗ್ ಮತ್ತು ಮ್ಯಾಚಿಂಗ್ ಪ್ರಕ್ರಿಯೆ ಆರಂಭವಾಗಿದ್ದು, ಮೊದಲ ಹಂತದಲ್ಲೇ ಸುಮಾರು 1 ಕೋಟಿ 10 ಲಕ್ಷ ಜನರ ಹೆಸರು ಮ್ಯಾಪ್ ಆಗಿಲ್ಲವೆಂದು ಸ್ವತಃ ರಾಜ್ಯ ಚುನಾವಣಾ ಆಯುಕ್ತರು ಒಪ್ಪಿಕೊಂಡಿದ್ದಾರೆ. ಇದು ಉದ್ದೇಶಪೂರ್ವಕ ಕೃತ್ಯವಲ್ಲದೇ ಮತ್ತೇನೆಂದು ಅವರು ಪ್ರಶ್ನಿಸಿದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್. ನವೀನ್‌ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿಪಿಐಎಂ ಜಿಲ್ಲಾಧ್ಯಕ್ಷ ಧರ್ಮೇಶ್ ಅಧ್ಯಕ್ಷತೆ ವಹಿಸಿದ್ದರು, ಎಂ.ಜಿ.ಪೃಥ್ವಿ, ಪತ್ರಕರ್ತ ಆರ್.ಪಿ.ವೆಂಕಟೇಶ್ ಮೂರ್ತಿ, ಎಂ.ಸಿ.ಡೋಂಗ್ರೆ, ಟಿ. ಆರ್.ವಿಜಯಕುಮಾರ್, ಕಾಡಯ್ಯ, ಅನ್‌ಷದ್ ಪಾಳ್ಯ, ಕಿಶೋರ್ ಕುಮಾರ್, ಪರಮಶಿವಯ್ಯ, ಚಲಂ ಹಾಡ್ಲಹಳ್ಳಿ, ರಾಜಶೇಖರ್ ಹುಲಿಕಲ್, ಈರೇಶ್ ಹಿರೇಹಳ್ಳಿ, ಅಂಬುಗ ಮಲ್ಲೇಶ್, ಆರಿಫ್ ಕರ್ಲೆ, ಸಮೀರ್, ಮುಬಶಿರ್ ಅಹಮದ್, ಹರೀಶ್ ಕಟ್ಟೆ, ತೌಫಿಕ್ ಅಹಮದ್, ಅನ್ಸರ್, ಅರವಿಂದ ಮತ್ತಿತರರಿದ್ದರು.

## ಹಸುಗಳ ಕಳ್ಳತನ ಪತ್ತೆಗೆ ಪೊಲೀಸರ ನಿರ್ಲಕ್ಷ್ಯ: ಸಂತ್ರಸ್ತ ಹೈನುಗಾರರ ಆರೋಪ



• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ನಿರಂತರವಾಗಿ ಹಸುಗಳ ಕಳ್ಳತನ ನಡೆಯುತ್ತಿದ್ದರೂ ಪೊಲೀಸರು ಕ್ರಮ ತೆಗೆದು ಕೊಳ್ಳುತ್ತಿಲ್ಲ. ದೂರು ನೀಡಲು ಹೋದರೆ ಸಾಕ್ಷಿ ಕೇಳುತ್ತಾರೆಂದು ಸಂತ್ರಸ್ತರು ದೂರಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ನಗರದ ವಿದ್ಯಾನಗರದ ನಿವಾಸಿ ಪುನೀತ್ ಮಾತನಾಡಿ, ನಮ್ಮ ಹಸು ಕಳುವಾಗಿರುವ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಮನಕ್ಕೆ ತಂದು, ಹಸು ಕಳವು ಮಾಡಿಕೊಂಡು ಹೋಗುತ್ತಿರುವ ಸಿಸಿಟಿವಿ ದೃಶ್ಯಗಳನ್ನು ನೀಡಿದ ಬಳಿಕ ಎಫ್‌ಐಆರ್ ದಾಖಲಿಸಿದ್ದಾರೆ. ನಗರ ಪ್ರದೇಶದಲ್ಲಿ ಹಸುಗಳನ್ನು ಸಾಕುವುದೇ ಕಷ್ಟದ ಕೆಲಸ ಅದರಲ್ಲೂ 1 ಲಕ್ಷಕ್ಕೂ ಅಧಿಕ ಬೆಲೆಯ ಹಸುಗಳನ್ನು ಕಳವು ಮಾಡುತ್ತಿರುವುದು ಆತಂಕ ಹುಟ್ಟಿಸಿದೆ ಎಂದು ಹೇಳಿದರು.

ಮೇಯಲು ಬಿಟ್ಟಿದ್ದ ಸಂದರ್ಭದಲ್ಲಿ 1.15 ಲ.ರೂ ಮೌಲ್ಯದ ಗರ್ಭಿಣಿ ಹಸುವನ್ನು ಜೂ.11 ರಂದು ಸಂಜೆ 5 ಗಂಟೆ ಸಮಯದಲ್ಲಿ ಹೆಲ್ಮೆಟ್ ಹಾಕಿಕೊಂಡು ಕಳ್ಳರು ಆಟೋದಲ್ಲಿ ಹತ್ತಿಸಿಕೊಂಡು ಹೋಗಿದ್ದಾರೆ. ನಮ್ಮ ಮನೆಯ ಸಮೀಪದ ಅಕ್ಷಯ ಕನ್ವೆನ್ಷನ್ ಹಾಲ್ ಬಳಿ ಗರ್ಭಿಣಿ ಹಸುವನ್ನು ಮೇಯಲು ಕಟ್ಟಿ, ಮನೆಗೆ ತೆರಳಿದ್ದು, ಮರಳಿ ಬಂದು ಪರಿಶೀಲಿಸಿದಾಗ ಹಸು ಇರಲಿಲ್ಲ. ಆತಂಕಕ್ಕೊಳಗಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ಹುಡುಕಾಟ ನಡೆಸಿದ್ದು, ಎಲ್ಲಿ ಹುಡುಕಿದರೂ ಹಸು ಪತ್ತೆಯಾಗಿಲ್ಲವೆಂದು ತಿಳಿಸಿದರು.

ಕಿರಣ್ ಎಂಬಾತನೇ ಈ ಕೃತ್ಯದಲ್ಲಿ ಭಾಗಿ ಯಾಗಿದ್ದು, ಹಸು ಕಳ್ಳತನದ ಹಿಂದೆ ಒಂದು ಜಾಲವೇ ಇದ್ದು, ಸುಮಾರು 30ಕ್ಕೂ ಹೆಚ್ಚು ಹಸುಗಳನ್ನು ಕಳವು ಮಾಡಿದ್ದಾರೆ. ಹಸು ಕಳ್ಳತನವಾಗಿರು ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಹಸುವನ್ನು ಖರೀದಿಸಿದ ಯಾರೇ ಆಗಿದ್ದರೂ ಕೂಡಲೇ ವಾಪಾಸ್ ಕೊಡಿ ಎಂದು ಆಗ್ರಹಿಸಿದರು. ಸುಶೀಲಮ್ಮ, ದಿಲೀಪ್, ಚಂದ್ರಣ್ಣ ಇದ್ದರು.

# ಲವ್ ಜಿಹಾದ್, ಮತಾಂತರಕ್ಕೆ ಕಡಿವಾಣ ಹಾಕಲು ಆಗ್ರಹ

### ಬಜರಂಗದಳ ಕಾರ್ಯಕರ್ತರಿಂದ ಪ್ರತಿಭಟನೆ | ಉಪವಿಭಾಗಾಧಿಕಾರಿಗೆ ಕಚೇರಿಯವರೆಗೆ ಮೆರವಣಿಗೆ

• ಪ್ರಜೋದಯ ವರದಿ

**ಸಕಲೇಶಪುರ:** ಅಕ್ರಮ ಗೋ ಸಾಗಾಟ, ಲವ್ ಜಿಹಾದ್, ಬಲವಂತದ ಮತಾಂತರ ಹಾಗು ಕಾರ್ಮಿಕರ ವಲಸೆ ನೀತಿ ಖಂಡಿಸಿ ಗುರುವಾರ ಬಜರಂಗ ದಳ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಉಪವಿಭಾಗಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ವಿಶ್ವ ಹಿಂದೂ ಪರಿಷತ್ ಪ್ರಾಂತ್ಯ ಕಾರ್ಯದರ್ಶಿ ಮಹಿಪಾಲ್ ಅವರು ಮಾತನಾಡಿ, ಸಂವಿಧಾನದ ಆಶಯಗಳಿಗೆ ಧಕ್ಕೆ ತರುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಸಮಾಜಘಾತಕ ಶಕ್ತಿಗಳ ವಿರುದ್ಧ ಹೋರಾಡಲು ಹಿಂದೂ ಸಂಘಟನೆಗಳು ಸಜ್ಜಾಗಿವೆ ಎಂದರು.

ಧರ್ಮ, ಮತ, ಭಾಷೆ ಹಾಗು ಪಂಗಡಗಳ ಆಧಾರದ ಮೇಲೆ ಸಮಾಜ ವಿಭಜಿಸುವ ರಾಜಕಾರಣವನ್ನು ಸರ್ಕಾರಗಳು ಕೈಬಿಡಬೇಕು. ಆಡಳಿತವು ಎಲ್ಲಾ ಸಮುದಾಯಗಳಿಗೂ ಸಮಾನ ನ್ಯಾಯ ಒದಗಿಸಬೇಕು. ಇಲ್ಲಿನ ಜನರಲ್ಲಿ ಧಾರ್ಮಿಕ ನಂಬಿಕೆ, ರಾಷ್ಟ್ರಭಕ್ತಿ ಹಾಗು ಪರಂಪರೆಗಳ ಬಗ್ಗೆ ಬದ್ಧತೆ ಇದೆ ಎಂದು ಹೇಳಿದರು.




ಸಮಾಜದಲ್ಲಿ ಧಾರ್ಮಿಕ ಅಥವಾ ಸಾಮಾಜಿಕ ಅಶಾಂತಿ ಉಂಟು ಮಾಡುವ ಯಾವುದೇ ಪ್ರಯತ್ನಗಳನ್ನು ಜನರು ಒಪ್ಪುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ನಡೆದಿರುವ ಕೆಲವು ಘಟನೆಗಳು ಹಾಗು ಯುವಜನರನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವುದಾಗಿ ಆರೋಪಿಸಲಾಗುತ್ತಿರುವ ಚಟುವಟಿಕೆಗಳ ಕುರಿತು ಸಮಗ್ರ ತನಿಖೆ ನಡೆಸಿ, ಕಾನೂನು ಬದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಹಿಂದೂ ಹಿತರಕ್ಷಣಾ ವೇದಿಕೆಯ ಮುಖಂಡ ರಘು ಸಕಲೇಶಪುರ ಅವರು ಮಾತನಾಡಿ, ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಘಟನೆಗಳ ಹಿನ್ನಲೆಯಲ್ಲಿ ಹಿಂದೂ ಸಮಾಜದಲ್ಲಿ ಅಸಮಾಧಾನ ಹಾಗು ಆಕ್ರೋಶ ವ್ಯಕ್ತವಾಗುತ್ತಿದೆ. ಗೋ ಸಂರಕ್ಷಣೆ, ಲವ್ ಜಿಹಾದ್ ಆರೋಪಗಳು ಹಾಗು ಅಕ್ರಮ ವಲಸೆ ವಿಚಾರಗಳ ಕುರಿತು ನಿರಂತರ ಜನಜಾಗೃತಿ ಮತ್ತು ಕಾನೂನುಬದ್ಧ ಹೋರಾಟ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಗೋ ರಕ್ಷಣೆಗಾಗಿ ಕಾರ್ಯನಿರ್ವಹಿಸುವವರಿಗೆ ಸೂಕ್ತ ರಕ್ಷಣೆ ಹಾಗು ನ್ಯಾಯ ದೊರೆಯಬೇಕು. ಮಧ್ಯಪ್ರದೇಶದಲ್ಲಿ ಗೋ ಸಂರಕ್ಷಣೆ ಪ್ರಕರಣಕ್ಕೆ ಸಂಬಂಧಿಸಿ ನ್ಯಾಯಾಲಯ ನೀಡಿರುವ ತೀರ್ಪಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಲವ್ ಜಿಹಾದ್ ಆರೋಪಗಳ ಕುರಿತು ಮಾತನಾಡಿದ ಅವರು, ಯುವತಿಯರನ್ನು ಗುರಿಯಾಗಿಸಿಕೊಂಡು ಮೋಸದ ಘಟನೆಗಳು ನಡೆಯುತ್ತಿವೆ ಎಂಬ ಆರೋಪಗಳ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕೆಂದು ಕರೆ ನೀಡಿದರು.

ಸಕಲೇಶಪುರದಲ್ಲಿ ನಡೆದಿತ್ತೆಂದು ಆರೋಪಿಸಲಾಗಿರುವ ಗೋ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಈಗಾಗಲೇ ದೂರು ಸಲ್ಲಿಸಲಾಗಿದ್ದು, ಪ್ರಕರಣದ ತನಿಖೆಯನ್ನು ವೇಗಗೊಳಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈ ಗೊಳ್ಳಬೇಕೆಂದು ಪೊಲೀಸರಿಗೆ ಒತ್ತಾಯಿಸಿದರು.

ಜೊತೆಗೆ ಕಾಫಿ ತೋಟ ಮಾಲೀಕರು ತಮ್ಮ ಬಳಿ ಕೆಲಸ ನಿರ್ವಹಿಸುವ ಕಾರ್ಮಿಕರ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಈ ಪ್ರತಿಭಟನೆ ಯಾವುದೇ ವ್ಯಕ್ತಿ ಅಥವಾ ಸಮುದಾಯವನ್ನು ಗುರಿಯಾಗಿಸಿಕೊಂಡದ್ದಲ್ಲ. ಗೋ ಸಂರಕ್ಷಣೆ, ಮಹಿಳಾ ಸುರಕ್ಷತೆ ಹಾಗೂ ಕಾನೂನು ಪಾಲನೆ ಕುರಿತು ಜನ ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಲಾಗಿದೆ ಎಂದು ಹೇಳಿದರು. ಹಿಂದೂ ಸಮಾಜವು ಕಾನೂನು ಬದ್ಧ ಹಾಗೂ ಪ್ರಜಾಸತ್ತಾತ್ಮಕ ಚೌಕಟ್ಟಿನೊಳಗೆ ಒಗ್ಗಟ್ಟಿನಿಂದ ಹೋರಾಟ ಮುಂದುವರಿಸಲಿದೆ ಎಂದರು.

ಪರಿಷತ್ ಜಿಲ್ಲಾ ಕಾರ್ಯದರ್ಶಿ ಹರೀಶ್ ಕರಡಿಗಾಲ, ಬಾಲಕೃಷ್ಣ, ವಿಜಯ್ ಕುಮಾರ್, ಬಜರಂಗದಳದ ವಿಷ್ಣು, ಸೃಜನ್, ರಘು ಬಾಳೆಗದ್ದೆ, ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಪ್ರಧಾನ ಕಾರ್ಯದರ್ಶಿ ಮಧು ಬೊಮ್ಮನಕೆರೆ, ಅಗ್ನಿ ಸೋಮ, ಸತ್ಯನಾರಾಯಣ ಗುಪ್ತ, ನಂದನ್, ಕೊಲ್ಲಹಳ್ಳಿ ಬಾಲರಾಜ್, ಜಂಬರಡಿ ಲೋಹಿತ್ ಮತ್ತಿತರರಿದ್ದರು.

## ಟೀಕಿಸುವುದು ಬಿಟ್ಟು ಜಿಲ್ಲೆ ಅಭಿವೃದ್ಧಿಗೆ ಗಮನ ಹರಿಸಿ

» ಮೊದಲನೇ ಪುಟದಿಂದ

ಭೂಮಿಯಲ್ಲಿ ತೆಂಗು, ಅಡಿಕೆ, ರೇಷ್ಮೆ ಬೆಳೆಯುತ್ತಿದ್ದು, ಉಪನಗರ ಯೋಜನೆ ಮಾಡಬಾರದು. ರಿಯಲ್ ಎಸ್ಟೇಟ್ ಮಾಫಿಯಾಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಹೀಗೆ ಮಾಡುತ್ತಿದ್ದಾರೆ. ಈಗಾಗಲೇ ಶೇ.40 ರಷ್ಟು ಭೂಮಿ ರಿಯಲ್ ಎಸ್ಟೇಟ್ ಉದ್ಯಮಿಗಳ ವಶದಲ್ಲಿದ್ದು, ಅವರನ್ನು ಉದ್ಧಾರ ಮಾಡುವ ಯೋಜನೆ ಇದು. ಹಿಂದೆ ರಾಜ್ಯದಲ್ಲಿ ಲಿಕ್ಕರ್ ಲಾಬಿ ಇತ್ತು, ಈಗ ರಿಯಲ್ ಎಸ್ಟೇಟ್ ಲಾಭಿ ನಡೆಯುತ್ತಿದೆ. ಈ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ಉಡಾಫೆ ತೋರುವುದು ಬೇಡ. ರೈತರಿಗೆ ಸ್ಪಂದಿಸಬೇಕು. ರೈತರ ಜೊತೆ ನಾವಿದ್ದು, ಅವರಿಗೆ ಬೆಂಬಲ ನೀಡುವ ಸಲುವಾಗಿ ಜೂ.21 ರಂದು ಬಿಡದಿಯ ಅಂಜಿಪುರ ಜಾಗದಿಂದ ಬೃಹತ್ ರೈತ ಜಾಥಾ ಹೊರಡಲಿದೆ. ಅದರಲ್ಲಿ ಜಿಲ್ಲೆಯ ಮುಖಂಡರು, ಕಾರ್ಯಕರ್ತರು ಭಾಗಿಯಾಗಲಿದ್ದಾರೆ. ಸರ್ಕಾರ ರೈತರ ಪರವಾಗಿ ಇದ್ದರೆ ಚಿಕ್ಕಬಳ್ಳಾಪುರ ದಲ್ಲಿ ಮಾಡಿ, ಮೊದಲೇ ಬೆಂಗಳೂರು ಹೊರಗಿನವರಿಗೆ ಆಶ್ರಯ ತಾಣವಾಗಿದ್ದು, ಯಾರನ್ನೋ ಉದ್ಧಾರ ಮಾಡಲು ಟೌನ್‌ಶಿಪ್ ಬೇಡ ಎಂದರು. ಜೆಡಿಎಸ್ ಹಾಸನ ತಾಲ್ಲೂಕು ಅಧ್ಯಕ್ಷ ಎಸ್. ದ್ಯಾವೇಗೌಡ, ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ ಇದ್ದರು.

## ಕೃಷಿಯಲ್ಲಿ ಆಧುನಿಕತೆ ಅಳವಡಿಸಿಕೊಳ್ಳಲು ರೈತರಿಗೆ ಸಲಹೆ

• ಪ್ರಜೋದಯ ವರದಿ

**ಹಾಸನ:** ಕೃಷಿಯಲ್ಲಿ ಅಧಿಕ ಇಳುವರಿ ಹಾಗು ಲಾಭ ಗಳಿಸಬೇಕೆಂದರೆ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಹೇಳಿದರು.

ನಗರ ಹೊರವಲಯದ ಕಂದಲಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಜೂ. 1 ರಿಂದ 30ರ ವರೆಗೆ ನಡೆಯುತ್ತಿರುವ ಖೇತ್ ಬಚಾವೊ ಅಭಿಯಾನದಲ್ಲಿ ಮಾತನಾಡಿದ ಅವರು, ಕೃಷಿ ಚಟುವಟಿಕೆಗಳಲ್ಲಿ ಸಾವಯವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಕೃಷಿ ವಿಜ್ಞಾನ ಕೇಂದ್ರದಲ್ಲಿ ಲಭ್ಯವಿರುವ ವಿವಿಧ ತಾಂತ್ರಿಕ ಸೇವೆ, ತರಬೇತಿ ಕಾರ್ಯಕ್ರಮ ಹಾಗು ಕೃಷಿ ಸಲಹೆಗಳನ್ನು ಸದುಪಯೋಗ ಪಡಿಸಿಕೊಳ್ಳುವ ಮೂಲಕ ಅಧಿಕ ಆದಾಯ ಪಡೆಯಬಹುದು. ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳುವುದು ಉತ್ತಮ ಬೆಳೆಗೆ ಅಗತ್ಯವಾಗಿದ್ದು, ಸಾವಯವ ಗೊಬ್ಬರ ಬಳಕೆ, ಮಣ್ಣಿನ ಪರೀಕ್ಷೆ ಹಾಗು ಸಮತೋಲಿತ ಪೋಷಕಾಂಶ ನಿರ್ವಹಣೆಗೆ ಆದ್ಯತೆ ನೀಡಬೇಕು.



ಕೃಷಿ ಭೂಮಿಯ ಫಲವತ್ತತೆಯನ್ನು ಉಳಿಸಿಕೊಂಡು ಮುಂದಿನ ಪೀಳಿಗೆಗೆ ಆರೋಗ್ಯಕರ ಮಣ್ಣನ್ನು ಹಸ್ತಾಂತರಿಸುವ ನಿಟ್ಟಿನಲ್ಲಿ ರೈತರು ಜಾಗೃತಿಯಿಂದ ಕಾರ್ಯನಿರ್ವಹಿಸಬೇಕೆಂದು ಕರೆ ನೀಡಿದರು.

ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ.ರಾಜೇಗೌಡ ಅವರು ಮಾತನಾಡಿ, ಅತಿಯಾದ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳಿಂದ ಮಣ್ಣು ನಿಧಾನವಾಗಿ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ಅದರಿಂದ ಮಾನವನ ಆರೋಗ್ಯದ ಮೇಲೆ ಪ್ರಭಾವ ಬೀರುವುದಲ್ಲದೇ ಕೃಷಿಗೆ ತಗಲುವ ವೆಚ್ಚ ಹೆಚ್ಚುತ್ತಿದೆ. ಮುಂದಿನ ದಿನಗಳಲ್ಲಿ ಬೆಳೆ ಉತ್ಪಾದನೆ ಕಡಿಮೆಯಾಗುವ ಸಾಧ್ಯತೆ ಹೆಚ್ಚುತ್ತಿದೆ ಎಂದರು.

ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ನಾರಾಯಣ್ ಗೌಡ, ಮಹಿಳಾ ಘಟಕದ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್, ಕೇಂದ್ರದ ವಿಜ್ಞಾನಿಗಳಾದ ಡಾ. ಶ್ರೀನಿವಾಸ ದೇಶಪಾಂಡೆ, ಡಾ. ಬಿ.ಆರ್.ಅರುಣ್ ಕುಮಾರ್, ಡಾ. ಹೆಚ್.ಮನೋಜ್, ಪಿ.ಸುಚಿತ್ರ ಮತ್ತಿತರರಿದ್ದರು.

## ಶಿವಲಿಂಗೇಗೌಡಗೆ ಮಂತ್ರಿಸ್ಥಾನ ನೀಡಲು ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿರುವ ಕಾಂಗ್ರೆಸ್ ಪಕ್ಷದ ಏಕೈಕ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಪರಿಶಿಷ್ಟ ಜಾತಿ ವಿಭಾಗದ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಮಲ್ಲಿಗೆವಾಳು ದ್ಯಾವಪ್ಪ ಅವರು ಒತ್ತಾಯಿಸಿದರು.




ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಎಂ. ಶಿವಲಿಂಗೇಗೌಡ ಅವರಿಗೆ ಮಂತ್ರಿ ಸ್ಥಾನ ನೀಡುವುದರಿಂದ ಜಿಲ್ಲೆಯ ಅಭಿವೃದ್ಧಿಗೆ ಹಾಗು ಪಕ್ಷ ಬಲವರ್ಧನೆಗೆ ಸಹಕಾರಿಯಾಗಲಿದೆ. ಅವರು ಈ ಜಿಲ್ಲೆಯ, ನಾಡಿನ ಬಡವರ ರೈತರು, ದಲಿತರು ಹಾಗು ಅಲ್ಪಸಂಖ್ಯಾತರ ಪರವಾಗಿ ಗಟ್ಟಿ ಧ್ವನಿಯಾಗಿ ಸದನದ ಒಳಗೆ ಮತ್ತು ಹೊರಗೆ ಬಹಳ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಅರಸೀಕೆರೆ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಅವರು ಎಲ್ಲಿಯೂ ಕೂಡ ಹೊಂದಾಣಿಕೆ ಮಾಡಿಕೊಂಡಿಲ್ಲ. ಪ್ರಬಲ ರಾಜಕಾರಣಿಯಾಗಿ 4 ಬಾರಿ ಅರಸೀಕೆರೆ ಕ್ಷೇತ್ರವನ್ನು ಪ್ರತಿನಿಧಿಸಿ ಗೆದ್ದು ಬಂದಿದ್ದಾರೆ. ಹಾಗಾಗಿ ಅವರಿಗೆ ಮಂತ್ರಿಸ್ಥಾನ ನೀಡಿದರೆ ಒಳಿತಾಗಲಿದೆ. ಜಿಲ್ಲೆಯ ಎಲ್ಲಾ ಸಮುದಾಯದ ಜನರು ಕೆಎಂಶಿ ಅವರನ್ನು ಒಪ್ಪಿಕೊಂಡಿದ್ದಾರೆ. ಬರದನಾಡು ಅರಸೀಕೆರೆಗೆ ಕುಡಿಯುವ ನೀರು ಹಾಗು ಕೆರೆ-ಕಟ್ಟೆಗಳಿಗೆ ನೀರು ತುಂಬಿಸುವ ಕೆಲಸಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡಿದ್ದಾರೆ. ಸದನದಲ್ಲಿ ನಿರಂತರವಾಗಿ ಈ ನಾಡಿನ ಹಾಗು ಜಿಲ್ಲೆಯ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿ ಆ ಸಮಸ್ಯೆಗಳ ಪರಿಹಾರಕ್ಕೆ ಧ್ವನಿ ಎತ್ತಿದ್ದಾರೆಂದರು.

ಈ ಎಲ್ಲಾ ಮಾನದಂಡಗಳ ಮೇಲೆ ಕೇಂದ್ರ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಾಜ್ಯ ನಾಯಕರಾದ ಸಿದ್ದರಾಮಯ್ಯ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೆ.ಎಂ. ಶಿವಲಿಂಗೇಗೌಡ ಅವರನ್ನು ಮಂತ್ರಿ ಮಾಡುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಬೇಕೆಂದು ಕಾಂಗ್ರೆಸ್‌ನ ಕೇಂದ್ರ ಹಾಗೂ ರಾಜ್ಯ ನಾಯಕರನ್ನು ಒತ್ತಾಯಿಸಿದರು.

ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಅಶೋಕ್, ಮುಖಂಡರಾದ ಸದಾಶಿವ, ವೆಂಕಟೇಶ್, ಮಣಿಕಂಠಸ್ವಾಮಿ, ಕರುಣಾಕರ ಇದ್ದರು.

# ಪ್ರಕೃತಿ ಸಂರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯ

• ಪ್ರಜೋದಯ ವರದಿ

**ಹಾಸನ:** ಭೂಮಿಗೆ ಮನುಷ್ಯನ ಅಗತ್ಯವಿಲ್ಲದಿದ್ದರೂ ಮನುಷ್ಯನ ಬದುಕಿಗೆ ಭೂಮಿ ಅತ್ಯಗತ್ಯವಾಗಿದೆ. ಪರಿಸರವನ್ನು ಉಳಿಸಿಕೊಳ್ಳುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದು ಹಸಿರು ಭೂಮಿ ಪ್ರತಿಷ್ಠಾನದ ಅಧ್ಯಕ್ಷ ವೈ.ಎನ್.ಸುಬ್ಬಸ್ವಾಮಿ ಅವರು ಸಲಹೆ ನೀಡಿದರು.

ನಗರದ ಶ್ರೀ ಕುವೆಂಪು ಮಹಿಳಾ ಸಂಘದಿಂದ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಏರುತ್ತಿರುವ ತಾಪಮಾನ, ಕುಸಿಯುತ್ತಿರುವ ಅಂತರ್ಜಲ ಮಟ್ಟ ಹಾಗು ಪರಿಸರ ಅಸಮತೋಲನಕ್ಕೆ ಮಾನವ ಚಟುವಟಿಕೆಗಳೇ ಕಾರಣವಾಗಿವೆ. ಒಂದು ಕಾಲದಲ್ಲಿ ಗ್ರಾಮ ಹಾಗು ನಗರ ಪ್ರದೇಶಗಳಲ್ಲಿ ನೀರಿನ ಮೂಲಗಳಾಗಿದ್ದ ಕೆರೆ, ಕಟ್ಟೆ ಮತ್ತು ಕಲ್ಯಾಣಿಗಳು ಇಂದು ಅತಿಕ್ರಮಣಕ್ಕೆ ಒಳಗಾಗಿ ಅವುಗಳ ಜಾಗದಲ್ಲಿ ಕಟ್ಟಡಗಳು ತಲೆ ಎತ್ತಿವೆ. ಅದರಿಂದ ಮಳೆ ನೀರು ಭೂಮಿಯೊಳಗೆ ಇಂಗುವ ಅವಕಾಶ ಕಡಿಮೆಯಾಗಿ ಅಂತರ್ಜಲ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರವೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಟ್ಟು ಅವುಗಳನ್ನು ಸಂರಕ್ಷಿಸುವುದು ಹಾಗು ನೀರಿನ ಮೂಲ ಪುನರುಜ್ಜೀವನಗೊಳಿಸುವುದಾಗಿದೆ ಎಂದು ಹೇಳಿದರು.



ದೇಶದ ವಿವಿಧ ಭಾಗಗಳಲ್ಲಿ ಅನೇಕ ವ್ಯಕ್ತಿಗಳು ಹಾಗು ಸಂಘಟನೆಗಳು ಪರಿಸರ ಸಂರಕ್ಷಣೆಗಾಗಿ ಸ್ವಯಂ ಪ್ರೇರಿತರಾಗಿ ಕೆಲಸ ಮಾಡುತ್ತಿರುವ ಉದಾಹರಣೆ ನೀಡಿದ ಅವರು, ಬಾಲಿವುಡ್ ನಟ ಅಮೀರ್ ಖಾನ್ ಅವರು 2016ರಲ್ಲಿ ಆರಂಭಿಸಿದ ಪಾನಿ ಫೌಂಡೇಶನ್ ಮಹಾರಾಷ್ಟ್ರದಲ್ಲಿ ಜಲಾನಯನ ನಿರ್ವಹಣೆ ಮತ್ತು ಮಳೆ ನೀರು ಕೊಯ್ಲು ಕುರಿತ ವೈಜ್ಞಾನಿಕ ತರಬೇತಿಗಳ ಮೂಲಕ ಹಲವು ಗ್ರಾಮಗಳಲ್ಲಿ ಕೋಟ್ಯಾಂತರ ಲೀಟರ್ ಅಂತರ್ಜಲ ಸಂಗ್ರಹವಾಗಲು ಕಾರಣವಾಗಿದೆ. ವಾಟರ್ ಕಪ್ ಸ್ಪರ್ಧೆಯಂತಹ ಹೊಸ ಪ್ರಯೋಗಗಳು ಗ್ರಾಮೀಣ ಜನರಲ್ಲಿ ಪರಿಸರ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದರು.

ಹಾಸನದಲ್ಲಿಯೂ ಪರಿಸರ ಸಂರಕ್ಷಣೆಗೆ ಹಸಿರುಭೂಮಿ ಪ್ರತಿಷ್ಠಾನ 2017 ರಿಂದ ಕಾರ್ಯನಿರ್ವಹಿಸುತ್ತಿದೆ. ಸುಮಾರು 11 ಕೆರೆ ಮತ್ತು 25 ಕಲ್ಯಾಣಿಗಳನ್ನು ಪುನಶ್ಚೇತನಗೊಳಿಸಲಾಗಿದೆ. ಜೊತೆಗೆ 36 ವಿವಿಧ ಜಾತಿಯ 5,000 ಗಿಡಗಳನ್ನು ನೆಟ್ಟು ಪೋಷಣೆ ಮಾಡಲಾಗಿದೆ. 2020-21ನೇ ಸಾಲಿನಲ್ಲಿ ಹಾಸನದ ಕೇಂದ್ರೀಯ ವಿದ್ಯಾಲಯದ 20 ಗುಂಟೆ ಪ್ರದೇಶದಲ್ಲಿ ಹಸಿರು ಭೂಮಿ ಪ್ರತಿಷ್ಠಾನದ ಸಹಯೋಗದೊಂದಿಗೆ 29 ವಿವಿಧ ಜಾತಿಯ 1,000 ಗಿಡಗಳನ್ನು ನೆಟ್ಟು ಮಿಯಾವಕಿ ಮಾದರಿಯ ಅರಣ್ಯ ನಿರ್ಮಿಸಲಾಗಿದೆ. ಈ ಯೋಜನೆ ಜಿಲ್ಲೆಯ ಪರಿಸರ ಸಂರಕ್ಷಣೆಗೆ ಮಾದರಿಯಾಗಿದ್ದು, ನಗರ ಪ್ರದೇಶದಲ್ಲಿ ಹಸಿರು ವಾತಾವರಣ ನಿರ್ಮಿಸುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಿದರು.

ಮಹಾತ್ಮ ಗಾಂಧಿ ಉದ್ಯಾನವನ ಹಾಗು ರಿಂಗ್ ರಸ್ತೆಯ 400 ಮೀಟರ್ ರಸ್ತೆ ವಿಭಜಕದಲ್ಲಿ ನೆಟ್ಟಿರುವ ಗಿಡಗಳ ನಿರ್ವಹಣೆ, ದೊಡ್ಡಕೊಂಡಗೊಳದ ಗುಂಡು ತೋಪಿನಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಸಂರಕ್ಷಣೆ ಮಾಡುವ ಕಾರ್ಯಗಳನ್ನು ಪ್ರತಿಷ್ಠಾನ ನಿರಂತರವಾಗಿ ಕೈಗೊಂಡಿದೆ ಎಂದರು.

ಪರಿಸರವನ್ನು ಉಳಿಸುವ ಕಾರ್ಯ ಸರ್ಕಾರ ಅಥವಾ ಕೆಲವೇ ಸಂಘಟನೆಗಳ ಜವಾಬ್ದಾರಿಯಲ್ಲ. ಪ್ರತಿಯೊಬ್ಬ ನಾಗರಿಕರೂ ಕೈಜೋಡಿಸಿದಾಗ ಮಾತ್ರ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸಿಕೊಡಲು ಸಾಧ್ಯವಾಗುತ್ತದೆ. ಮರ ನೆಡುವುದು, ನೀರು ಸಂರಕ್ಷಿಸುವುದು ಮತ್ತು ಪ್ರಕೃತಿಯೊಂದಿಗೆ ಸಹಬಾಳ್ವೆ ನಡೆಸುವುದು ಪ್ರತಿಯೊಬ್ಬರ ಜೀವನದ ಭಾಗವಾಗಬೇಕೆಂದು ಕರೆ ನೀಡಿದರು. ಕಾರ್ಯಕ್ರಮದ ಅಂಗವಾಗಿ ರವೀಂದ್ರ ನಗರ ಉದ್ಯಾನವನದಲ್ಲಿ ವಿವಿಧ ಜಾತಿಯ ಹಣ್ಣಿನ ಗಿಡ ನೆಡಲಾಯಿತು.

## ಪಿಎಂಶ್ರೀ ಶಾಲೆಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಹಿಂಭಾಗದಲ್ಲಿರುವ ಪಿಎಂಶ್ರೀ ಸರ್ಕಾರಿ ಶಾಲೆಗೆ ಅನುಮೋದಿತ ಚಟುವಟಿಕೆಗಳ ಅನುಷ್ಠಾನದಡಿ ಅತಿಥಿ ಶಿಕ್ಷಕರು ಹಾಗು ವಿವಿಧ ಹುದ್ದೆಗೆ ಅರ್ಜಿ ಆಹ್ವಾನಿಸಿದೆ.

2026-27ನೇ ಸಾಲಿಗೆ 10 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಆಸಕ್ತ ಅರ್ಹರು ಜೂ. 29ರೊಳಗಾಗಿ ಶಾಲಾ ಕಚೇರಿ ಸಮಯದಲ್ಲಿ ಅರ್ಜಿ ಸಲ್ಲಿಸಬಹುದೆಂದು ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಕೋರಿದ್ದಾರೆ.

ಇಸಿಸಿಇ ಶಿಕ್ಷಕ, ಆಯಾ ಸಹಾಯಕರು, ಮ್ಯೂಸಿಕ್ ಕಮ್ ಡ್ಯಾನ್ಸ್ ಸಂಪನ್ಮೂಲ ವ್ಯಕ್ತಿ, ಕಂಪ್ಯೂಟರ್ ಶಿಕ್ಷಕರು, ಯೋಗ ಮತ್ತು ಕರಾಟೆ, ಭದ್ರತಾ ಸಿಬ್ಬಂದಿ ಹಾಗು ವಿದ್ಯಾರ್ಥಿ ದತ್ತಾಂಶ ನಿರ್ವಹಣಾ ಸಹಾಯಕರ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಮಾಹಿತಿಗೆ ಮೊ.ನಂ. 9481544176 ಇಲ್ಲಿಗೆ ಸಂಪರ್ಕಿಸಲು ತಿಳಿಸಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019